RNI: KARKAN\2019\78042



ಸಂಪಾದಕರು : ಸಿ.ಎಸ್.ಸಮಗಂಡಿ.

# ಸತ್ಯಮಿಥ್ಯ

ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

Satyamithi Kannada Daily Morning

ಚನ್ನು ಮೆನ್ಸ್‌ವೇರ್
ರೆಡಿಮೇಡ್ ಡ್ರೆಸ್
ಚನ್ನು ಸ್ಟಿಚ್‌ವರ್ಲ್ಡ್
ಜೆಂಟ್ಸ್ ಡ್ರೆಸ್ ಅಂಡ್ ಟೇಲರ್
ಗಜೇಂದ್ರಗಡ-582114.
ಸೆಲ್ : 9986982482, 9686165708

ವೀರಭದ್ರೇಶ್ವರ ರಥೋತ್ಸವಕ್ಕೆ ಸಾವಿರಾರು ಭಕ್ತರ ಸಾಕ್ಷಿ 2

ಜನರ ಸಮಸ್ಯೆಗಳಿಗೆ ತ್ವರಿತ ಪರಿಹಾರ ಕಲ್ಪಿಸಿ: ಶಾಸಕ ಜಗದೀಶ್ ಗುಡಗುಂಟಿ 3

ಪ್ರಜಾಸೇವೆ ಆಂದೋಲನಕ್ಕೆ ಎಲ್ಲೆಡೆ ಮೆಚ್ಚುಗೆ; ತಹಶೀಲ್ದಾರ್ ನಾಗರಾಜ 4

ಸಂಪುಟ(Volume): 1 ಸಂಚಿಕೆ (Issue): 66 ● ಪುಟ (Page): 4 ● ದರ: Rs. 4 ಭಾನುವಾರ 13 ಸೆಪ್ಟೆಂಬರ್ 2026 ● 13 SEPTEMBER 2026 ● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ

# ಒಗ್ಗಟ್ಟಿನ ಮಂತ್ರ ಜಪಿಸಿದ ಪ್ರಧಾನಿ ಮೋದಿ

## ದೆಹಲಿಯ ಭಾರತ್ ಮಂಟಪದಲ್ಲಿ 18ನೇ ಬ್ರಿಕ್ಸ್ ಶೃಂಗಸಭೆ | ಹಲವು ರಾಷ್ಟ್ರಗಳ ಗಣ್ಯಾತಿಗಣ್ಯರು ಭಾಗಿ

**ಸತ್ಯಮಿಥ್ಯ ನ್ಯೂಸ್ ಡೆಸ್ಕ್ ನವದೆಹಲಿ:** ನವದೆಹಲಿಯ ಭಾರತ್ ಮಂಟಪದಲ್ಲಿ 18ನೇ ಬ್ರಿಕ್ಸ್ ಶೃಂಗಸಭೆ ಆರಂಭವಾಗಿದೆ. ಈ ಉನ್ನತ ಮಟ್ಟದ ಶೃಂಗಸಭೆಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಚೀನಾ ಅಧ್ಯಕ್ಷ ಕ್ಸಿ ಜಿನ್ ಪಿಂಗ್, ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಹಾಗೂ ದಕ್ಷಿಣ ಆಫ್ರಿಕಾ ಅಧ್ಯಕ್ಷ ರಾಮಫೋಸಾ ಸೇರಿದಂತೆ ಹಲವು ರಾಷ್ಟ್ರಗಳ ಗಣ್ಯಾತಿಗಣ್ಯರು ಭಾಗವಹಿಸಿದ್ದಾರೆ.

**ಬ್ರಿಕ್ಸ್ ಒಕ್ಕೂಟಕ್ಕೆ ಮೋದಿ 10 ಪ್ರಸ್ತಾವನೆ:** ಸಭೆಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು ಬ್ರಿಕ್ಸ್ ಒಕ್ಕೂಟದ ಮುಂದೆ 10 ಪ್ರಸ್ತಾವಗಳನ್ನು ಮಂಡಿಸಿದರು. "ಭಾರತವು ಮಾನವೀಯತೆಗೆ ಮೊದಲ ಆದ್ಯತೆ ನೀಡುತ್ತದೆ. ಎಲ್ಲರನ್ನೂ ಒಗ್ಗಟ್ಟಾಗಿ ಜೊತೆಗೆ ಕರೆದುಕೊಂಡು ಹೋಗುವುದು ನಮ್ಮ ಮುಖ್ಯ ಉದ್ದೇಶ" ಎಂದು ಒಗ್ಗಟ್ಟಿನ ಮಂತ್ರ ಜಪಿಸಿದ ಅವರು, ಈ ವರ್ಷದ ಬ್ರಿಕ್ಸ್ ಶೃಂಗಸಭೆಯು ಐತಿಹಾಸಿಕ ಮೈಲುಗಲ್ಲು ಹಾಗೂ ವಿಶೇಷ ಮಹತ್ವ ಪಡೆದುಕೊಂಡಿದೆ ಎಂದರು.

ಮುಂದುವರಿದು ಮಾತನಾಡಿದ ಅವರು, "ಬ್ರಿಕ್ಸ್ ಒಕ್ಕೂಟವು ಯಾವುದೇ ದೇಶದ ವಿರುದ್ಧವಾಗಿಲ್ಲ. ಬ್ರಿಕ್ಸ್ ದೇಶಗಳ ನಡುವಿನ ಸಂಬಂಧ ವೃದ್ಧಿಗೆ ಇದು ಸ್ಥಿತಿಸ್ಥಾಪಕತ್ವವಾಗಿದೆ. ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆಗೆ ಪ್ರಮುಖ ಆದ್ಯತೆ ನೀಡಲಾಗುವುದು," ಎಂದು ಸ್ಪಷ್ಟಪಡಿಸಿದರು.

**30 ನಗರಗಳಲ್ಲಿ 350ಕ್ಕೂ ಹೆಚ್ಚು ಸಭೆಗಳು**

ಭಾರತದ ಅಧ್ಯಕ್ಷತೆಯಲ್ಲಿ 350ಕ್ಕೂ ಹೆಚ್ಚು ಸಭೆಗಳನ್ನು ಆಯೋಜನೆ ಮಾಡಲಾಗುವುದು ಹಾಗೂ ದೇಶದ 30 ನಗರಗಳಲ್ಲಿ ವಿವಿಧ ಬ್ರಿಕ್ಸ್ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಪ್ರಧಾನಿ ತಿಳಿಸಿದರು. ಭಾರತದ ಬ್ರಿಕ್ಸ್ ಶೃಂಗಸಭೆಯ ಅಧ್ಯಕ್ಷತೆಯನ್ನು ಯಶಸ್ವಿಗೊಳಿಸಲು ಸಹಕಾರ ನೀಡಿದ ಎಲ್ಲರಿಗೂ ಅವರು ಧನ್ಯವಾದ ಅರ್ಪಿಸಿದರು.

**20 ವರ್ಷ ಪೂರೈಸಿದ ಬ್ರಿಕ್ಸ್: ಪ್ರೌಢಾವಸ್ಥೆಯ ಹಂತ:** ಬ್ರಿಕ್ಸ್ ಸ್ಥಾಪನೆಯಾಗಿ 20 ವರ್ಷ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಈ ಶೃಂಗಸಭೆಗೆ ವಿಶೇಷ ಮಹತ್ವವಿದೆ. 20ನೇ ವಯಸ್ಸು ಮಾನವನ ಜೀವನದಲ್ಲಿ ಪರಿಪಕ್ವತೆ ಮತ್ತು ಜವಾಬ್ದಾರಿಯ ಹೊಸ ಹಂತವನ್ನು ತಲುಪಿಸುತ್ತದೆ. ಅದೇ ರೀತಿ ಬ್ರಿಕ್ಸ್ ಕೂಡ ಈಗ ಪ್ರೌಢಾವಸ್ಥೆಯ ಹಂತಕ್ಕೆ ಪ್ರವೇಶಿಸಿದ್ದು, ಜಾಗತಿಕ ವೇದಿಕೆಯಲ್ಲಿ ವಿಶಿಷ್ಟ ಗುರುತು ಮೂಡಿಸಿದೆ. ಮುಂದಿನ ಹಂತದಲ್ಲಿ ಪರಸ್ಪರ ಗೌರವ, ಸಹಕಾರ ಮತ್ತು ಜವಾಬ್ದಾರಿಯೊಂದಿಗೆ ಬ್ರಿಕ್ಸ್ ದೇಶಗಳ ಸಂಘಟನೆಯನ್ನು ಮತ್ತಷ್ಟು ಬಲಪಡಿಸೋಣ ಎಂದು ಕರೆ ನೀಡಿದರು.

ಸಂಬಂಧಗಳನ್ನು ಸ್ಪಷ್ಟ ಫಲಿತಾಂಶವಾಗಿ ಮಾರ್ಪಡಿಸುವ ಸಮಯಬಂದಿದೆ ಎಂದ ಮೋದಿ, ಮುಂದಿನ 20 ವರ್ಷಗಳಿಗಾಗಿ ಹೊಸ ಹಾಗೂ ಮಹತ್ವಾಕಾಂಕ್ಷೆಯ ಕಾರ್ಯಸೂಚಿ ರೂಪಿಸಲು ಬ್ರಿಕ್ಸ್ ಒಕ್ಕೂಟಕ್ಕೆ ಆಹ್ವಾನ ನೀಡಿದರು. ಪ್ರತಿ ವರ್ಷ ಅಧ್ಯಕ್ಷತೆ ಬದಲಾದರೂ ಸಾಂಸ್ಥಿಕ ನಿರಂತರತೆ ನಿಲ್ಲಬಾರದು. ಸಮಿತಿಯ ನಿರಂತರತೆ ಮತ್ತು ಅನುಷ್ಠಾನ ಕಾರ್ಯವಿಧಾನ ಸ್ಥಾಪನೆ ಅಗತ್ಯವಾಗಿದೆ. ಟ್ರೊಯ್ಕಾ ವ್ಯವಸ್ಥೆಯ ಮೂಲಕ ಬ್ರಿಕ್ಸ್‌ನ ಎಲ್ಲಾ ಉಪಕ್ರಮಗಳ ಫಲಿತಾಂಶಗಳ ಮೇಲ್ವಿಚಾರಣೆ ಹಾಗೂ ನಿರ್ಧಾರಗಳ ಅನುಷ್ಠಾನಕ್ಕಾಗಿ ಸುರಕ್ಷಿತ ಡಿಜಿಟಲ್ ರೆಪೊಸಿಟರಿ ನಿರ್ಮಿಸುವ ಕೆಲಸ ಆಗಬೇಕಿದೆ ಎಂದು ಪ್ರತಿಪಾದಿಸಿದರು.



**'ಪ್ರಿವಿಲೇಜ್ ಪಿರಮಿಡ್' ಬದಲಾವಣೆಗೆ ಕರೆ**

ಬ್ರಿಕ್ಸ್ ಬಲಪಡಿಸುವ ಜೊತೆಗೆ ಜಾಗತಿಕ ಆಡಳಿತದಲ್ಲಿಯೂ ಸುಧಾರಣೆ ಆಗಬೇಕು. ಪ್ರಸ್ತುತ ಜಾಗತಿಕ ಆಡಳಿತ ವ್ಯವಸ್ಥೆಯು ಪಿರಮಿಡ್‌ನಂತಿದ್ದು, ಮೇಲ್ಭಾಗದಲ್ಲಿ ಅಧಿಕಾರ ಮತ್ತು ನಿರ್ಧಾರ ಕೈಗೊಳ್ಳುವ ಶಕ್ತಿ ಕೇಂದ್ರೀಕೃತವಾಗಿದೆ. ಕೆಳಭಾಗದಲ್ಲಿರುವ ಹಲವು ದೇಶಗಳು ನಿರ್ಧಾರಗಳಿಂದ ಪ್ರಭಾವಿತವಾಗುತ್ತವೆಯಾದರೂ, ನಿರ್ಧಾರ ರೂಪಿಸುವಲ್ಲಿ ಸಮರ್ಪಕವಾಗಿ ಪಾತ್ರವಹಿಸುತ್ತಿಲ್ಲ. ಜಾಗತಿಕ ಬಿಕ್ಕಟ್ಟುಗಳ ಮುಂಚೂಣಿಯಲ್ಲಿರುವ 'ಗ್ಲೋಬಲ್ ಸೌತ್' ದೇಶಗಳು ನಿರ್ಧಾರಗಳನ್ನು ಕೈಗೊಳ್ಳುವಾಗ ಹಿಂಬದಿಯಲ್ಲಿರುತ್ತವೆ.

ಈ 'ಪ್ರಿವಿಲೇಜ್ ಪಿರಮಿಡ್' ಅನ್ನು ಪಾಲುದಾರಿಕೆ ವೇದಿಕೆಯಾಗಿ ಪರಿವರ್ತಿಸಬೇಕು. ಪ್ರತಿಯೊಂದು ದೇಶಕ್ಕೂ ಧ್ವನಿ, ಪ್ರತಿಯೊಬ್ಬ ಸದಸ್ಯನಿಗೂ ಸ್ಥಾನ ಸಿಗಬೇಕು ಹಾಗೂ ಮಾನವ ಅಭಿವೃದ್ಧಿಯೇ ಎಲ್ಲಾ ಪ್ರಯತ್ನಗಳ ಕೇಂದ್ರವಾಗಬೇಕು ಎಂದು ಮೋದಿ ಹೇಳಿದರು.

### ಯುಎನ್‌ಎಸ್‌ಸಿ ಸುಧಾರಣೆಗೆ ಒತ್ತಾಯ

**ಮುಂದಿನ ಬ್ರಿಕ್ಸ್ ಶೃಂಗಸಭೆಯೊಳಗೆ ಸುಧಾರಣಾ ಮಾರ್ಗಸೂಚಿ (ರೋಡ್ ಮ್ಯಾಪ್) ರಚಿಸುವ ಗುರಿ ಹೊಂದಬೇಕು. ಈ ರೋಡ್ ಮ್ಯಾಪ್‌ನಲ್ಲಿ ಪ್ರಮುಖವಾಗಿ ಪ್ರತಿಧ್ವನಿ, ಸ್ಪಂದನಾಶೀಲತೆ ಮತ್ತು ನಿಯಮ ರಚನೆ□ಈ ಮೂರು ಅಂಶಗಳಿಗೆ ಒತ್ತು ನೀಡಬೇಕು. ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸುಧಾರಣೆ ಇನ್ನು ವಿಳಂಬವಾಗಬಾರದು. ಯು ಎನ್ ಎಸ್ ಸಿ ಸುಧಾರಣೆಯ ಮಾತುಕತೆಗಳಿಗೆ ನಿಗದಿತ ಕಾಲಮಿತಿ ಮತ್ತು ಸ್ಪಷ್ಟ ಫಲಿತಾಂಶ ಇರಬೇಕು ಎಂದು ಪ್ರಧಾನಿ ಮೋದಿ ಪ್ರತಿಪಾದಿಸಿದರು.**

# 'ದೂರು ಕೊಟ್ಟವರು ಯಾರೆಂದು ಗೊತ್ತಿದೆ'

## ಇಡಿ ದಾಳಿ ಬೆನ್ನಲ್ಲೇ ಸಚಿವ ಜಾರಕಿಹೊಳಿ ಸ್ಫೋಟಕ ಹೇಳಿಕೆ

**ಸತ್ಯಮಿಥ್ಯ ಸುದ್ದಿಮೂಲ ಬೆಂಗಳೂರು:** ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರ ನಿವಾಸದ ಮೇಲೆ ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ದಾಳಿ ನಡೆಸಿ ಬರೋಬ್ಬರಿ 36 ಗಂಟೆಗಳ ಕಾಲ ಪರಿಶೀಲನೆ ನಡೆಸಿದ ಬೆನ್ನಲ್ಲೇ ಸಚಿವರು ನಗರದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ. ತಮ್ಮ ವಿರುದ್ಧ ಇಡಿ ಅಧಿಕಾರಿಗಳಿಗೆ ದೂರು ನೀಡಿದವರ ಬಗ್ಗೆ ತಮಗೆ ಮಾಹಿತಿ ಇದೆ ಎಂದು ಅವರು ತಿಳಿಸಿದ್ದಾರೆ.



ಬೆಂಗಳೂರಿನಲ್ಲಿ ಶನಿವಾರ ಮಾತನಾಡಿದ ಸಚಿವ ಸತೀಶ್ ಜಾರಕಿಹೊಳಿ, "ನನ್ನ ವಿರುದ್ಧ ಇಡಿಗೆ ದೂರು ಕೊಟ್ಟವರು ಯಾರು ಅಂತ ಗೊತ್ತಿದೆ. ಈ ವಿಷಯವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಗಮನಕ್ಕೆ ತಂದಿದ್ದೇನೆ," ಎಂದರು.

ಸಂಶಯ ವ್ಯಕ್ತಪಡಿಸಿದ ಸಚಿವರು, "ಇಲ್ಲಿ ನಮ್ಮ ಪಕ್ಷದವರೇ ಇರಬಹುದು ಅಥವಾ ಬಿಜೆಪಿಯವರು ಇರಬಹುದು, ಇಲ್ಲವೇ ಅವರ ಸಂಬಂಧಿ ಇರಬಹುದು. 50:50 ಸಾಧ್ಯತೆ ಇದೆ. ಯಾರು ಎಂದು ಅವರಿಗೆ ಗೊತ್ತಿದೆ, ನಾವು ಹೇಳಿದ್ದೇವೆ. ಯಾರೇ ಇದ್ದರೂ ಮುಖ್ಯಮಂತ್ರಿಗಳು ಈ ಬಗ್ಗೆ ಗಮನವಹಿಸುತ್ತಾರೆ," ಎಂದು ಹೇಳಿದರು.

ಇಡಿ ವಿಚಾರಣೆ ಮತ್ತು ಹೂಡಿಕೆ ಆರೋಪಗಳಿಗೆ ಸ್ಪಷ್ಟನೆ ನೀಡಿದ ಅವರು, "ಇಡಿ ಅಧಿಕಾರಿಗಳು ವಿಚಾರಣೆಗೆ ಕರೆದರೆ ದಾಖಲೆಗಳನ್ನು ಕೊಡುತ್ತೇವೆ. ಹೂಡಿಕೆ ಅಂದರೆ ಅಧಿಕೃತವಾಗಿ ವರ್ಗಾವಣೆ ಆಗಬೇಕಲ್ಲವೇ? ನಾನು ಹೂಡಿಕೆ ಮಾಡಿಲ್ಲ ಅಂತಾ ಇಡಿ ಅಧಿಕಾರಿಗಳಿಗೆ ಹೇಳಿದ್ದೇನೆ. ಹೆಚ್ಚಿನ ತನಿಖೆ ಮಾಡಬೇಕೆಂದು ಅಧಿಕಾರಿಗಳು ತಿಳಿಸಿದ್ದಾರೆ. ನೋಟಿಸ್ ಕೊಟ್ಟು ಕರೆಸಿದರೆ ಸರಿಯಾದ ಉತ್ತರ ನೀಡುತ್ತೇನೆ," ಎಂದರು.

ತನಿಖಾ ಪ್ರಕ್ರಿಯೆಯ ಬಗ್ಗೆ ವಿವರಣೆ ನೀಡುತ್ತಾ, "ಇನ್ನೂ ಬಹಳ ಪ್ರಕ್ರಿಯೆ ಇದೆ, 3 ರಿಂದ 6 ತಿಂಗಳ ಅವಕಾಶ ಇದೆ. ಅನುಮಾನಾಸ್ಪದ ಅಂತಾ ಹೇಳಿದ್ದಾರೆ, ಇದೇ ಫೈನಲ್ ಅಲ್ಲ. ತನಿಖೆ ಇನ್ನೂ ಪ್ರಗತಿಯ ಹಂತದಲ್ಲಿದೆ ಎಂದು ಪ್ರೆಸ್‌ನೋಟ್‌ನಲ್ಲೇ ಉಲ್ಲೇಖಿಸಲಾಗಿದೆ. ಮೇಲ್ನೋಟಕ್ಕೆ ಹೂಡಿಕೆ ಇದೆ ಅಂತಾ ಹೇಳುತ್ತಿದ್ದಾರೆ," ಎಂದು ವಿವರಿಸಿದರು.

ಇದೇ ವೇಳೆ, ಇನ್ನೂ 4–5 ಜನರ ಮೇಲೆ ಇಡಿ ದಾಳಿ ಆಗಬಹುದು ಎಂದು ಮುಖ್ಯಮಂತ್ರಿಗಳು ಹೇಳಿರುವುದನ್ನು ಉಲ್ಲೇಖಿಸಿದ ಅವರು, "ಇಡಿ ಹೆಚ್ಚಿನ ವಿಚಾರಣೆ ನಡೆಸಲಿ, ಆರೋಪ ಸಾಬೀತಾಗಲಿ. ಈ ಹಂತದಲ್ಲಿ ಆರೋಪದ ಬಗ್ಗೆ ಯಾವುದೇ ನಿರ್ಧಾರಕ್ಕೆ ಬರಲ್ಲ. ಇಡಿ ಅಧಿಕಾರಿಗಳು ಕರೆದಾಗ ವಿಚಾರಣೆಗೆ ಹೋಗುತ್ತೇವೆ. ನಮ್ಮ ಸೇಫ್ಟಿಯಲ್ಲಿ ನಾವು ಇರಬೇಕು. ರಾಜಕಾರಣದಲ್ಲಿ ಇದೆಲ್ಲಾ ಸಾಮಾನ್ಯ, ಅವರಿಗೆ ಕೇಳುವ ಅಧಿಕಾರ ಇದೆ," ಎಂದು ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು.

# ಒಂದೇ ಸೂರಿನಡಿ ಪರಿಸರ ಸ್ನೇಹಿ ಗಣೇಶ ಮೂರ್ತಿ ಮಾರಾಟ ಸ್ಥಳಕ್ಕೆ ಶಾಸಕ ಎಚ್.ಕೆ. ಪಾಟೀಲ ಭೇಟಿ

**ಸತ್ಯಮಿಥ್ಯ ಸುದ್ದಿಮೂಲ ಗದಗ:** ನಗರದ ಎಪಿಎಂಸಿ ಆವರಣದಲ್ಲಿರುವ ಸ್ವಾಮಿ ವಿವೇಕಾನಂದ ಸಭಾಭವನದಲ್ಲಿ ನಡೆಯುತ್ತಿರುವ "ಒಂದೇ ಸೂರಿನಡಿ ಪರಿಸರ ಸ್ನೇಹಿ ಗಣೇಶ ಮೂರ್ತಿಗಳ ಮಾರಾಟ" ಸ್ಥಳಕ್ಕೆ ಶಾಸಕ ಎಚ್.ಕೆ. ಪಾಟೀಲ ಅವರು ಭೇಟಿ ನೀಡಿ, ಮೂರ್ತಿ ತಯಾರಕರೊಂದಿಗೆ ಸಮಾಲೋಚನೆ ನಡೆಸಿದರು.



ಪರಿಸರಸ್ನೇಹಿ ಮಣ್ಣಿನ ಗಣೇಶಮೂರ್ತಿಗಳ ಮಾರಾಟಕ್ಕೆ ಕಲಾವಿದರಿಗೆ ಅನುಕೂಲ ಕಲ್ಪಿಸಿರುವ ವ್ಯವಸ್ಥೆಯನ್ನು ವೀಕ್ಷಿಸಿದ ಶಾಸಕರು, ಮೂರ್ತಿ ತಯಾರಕರೊಂದಿಗೆ ಮಾತುಕತೆ ನಡೆಸಿ ಅವರ ಸಮಸ್ಯೆಗಳನ್ನು ಆಲಿಸಿದರು.

ಕಳೆದ 11 ವರ್ಷಗಳಿಂದ ಗಣೇಶ ಮೂರ್ತಿ ತಯಾರಕರಿಗೆ ಮಾರಾಟಕ್ಕೆ ಅನುಕೂಲ ಕಲ್ಪಿಸುತ್ತಿರುವ ಶಾಸಕ ಎಚ್.ಕೆ. ಪಾಟೀಲ ಅವರ ಸೇವೆಯನ್ನು ಸ್ಮರಿಸಿದ ಗದಗ ಜಿಲ್ಲಾ ಗಣೇಶ ಮೂರ್ತಿ ತಯಾರಕರ ಸಂಘದ ವತಿಯಿಂದ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮೂರ್ತಿ ತಯಾರಕರು, ಸಂಘದ ಪ್ರಧಾನ ಕಾರ್ಯದರ್ಶಿ ಮುತ್ತಣ್ಣ ಭರಡಿ ಸೇರಿದಂತೆ ಸಂಘದ ಪದಾಧಿಕಾರಿಗಳು ಹಾಗೂ ಕಲಾವಿದರು ಉಪಸ್ಥಿತರಿದ್ದರು. ಪರಿಸರ ಸಂರಕ್ಷಣೆಯೊಂದಿಗೆ ಸ್ಥಳೀಯ ಕಲಾವಿದರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಇಂತಹ ಅವಕಾಶಗಳು ಮತ್ತಷ್ಟು ಮುಂದುವರಿಯಬೇಕು ಎಂಬ ಅಭಿಪ್ರಾಯ ವ್ಯಕ್ತವಾಯಿತು

# ವಂದೇ ಮಾತರಂ ಗೀತೆಗೆ ಕಾಂಗ್ರೆಸ್ ಅವಮಾನ

**ಬೆಂಗಳೂರು:** ಅಲ್ಪಸಂಖ್ಯಾತರನ್ನು ಓಲೈಸಲು ಕಾಂಗ್ರೆಸ್ ಯಾವ ಮಟ್ಟಕ್ಕೂ ಇಳಿಯುತ್ತದೆ. ಆದರೆ ಬಿಜೆಪಿ ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಎಂಬ ಧ್ಯೇಯದಲ್ಲಿ ವಿಶ್ವಾಸವಿಟ್ಟಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ. ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಹಮ್ಮಿಕೊಂಡಿದ್ದ ಶ್ರೀ ಕೃಷ್ಣ ಜನ್ಮಾಷ್ಟಮಿ ಮಹೋತ್ಸವದಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ಸಂಗ್ರಾಮದ ವೇಳೆ ದೇಶದ ಜನರಿಗೆ ದೇಶಾಭಿಮಾನದ ಕಿಚ್ಚುಹಚ್ಚಿದ್ದ ವಂದೇ ಮಾತರಂ ಗೀತೆಗೆ ಅವಮಾನ ಮಾಡುವ ಕಾಂಗ್ರೆಸ್, ವಿಧಾನ ಸೌಧದಲ್ಲೇ ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಕೂಗಿದರೆ ಬೆಂಬಲಿಸುತ್ತದೆ. ಆದರೆ ಬಿಜೆಪಿ ದೇಶದ ಎಲ್ಲಾ ಸಮುದಾಯಗಳ ಕಲ್ಯಾಣಕ್ಕೆ ದುಡಿಯುತ್ತಿದೆ ಎಂದು ತಿಳಿಸಿದರು.

ಮೀಸಲಾತಿ ಸೇರಿದಂತೆ ವಿವಿಧ ವಿಚಾರಗಳಲ್ಲಿ ಕಾಂಗ್ರೆಸ್ ಸರ್ಕಾರ ಹಿಂದೆ ಹೇಳಿದ್ದೊಂದು ಆದರೆ ನಡೆದುಕೊಂಡಿದ್ದೇ ಒಂದು. ಒಟ್ಟಾಗಿ, ಒಂದಾಗಿ ದೇಶವನ್ನು ಮುನ್ನಡೆಸಲು ಬಿಜೆಪಿ ಮುಂದಾದರೆ ಕಾಂಗ್ರೆಸ್ ಒಂದು ಸಮುದಾಯವನ್ನು ಓಲೈಸಿಕೊಂಡು ಮತ ಪಡೆಯಲು ನೋಡುತ್ತಿದೆ ಎಂದು ದೂರಿದರು.



ಭಾರತ್ ಜೋಡೊ ಕಿವಿ ಮೇಲೆ ಹೂ ಗ್ಯಾರಂಟಿ ಇಲ್ಲದೆ ಅಧಿಕಾರದಲ್ಲಿ ಇರಲು ಸಾಧ್ಯವಿಲ್ಲ ಎಂದು ಮನವರಿಕೆ ಆಗಿರುವ ಕಾಂಗ್ರೆಸ್ ಈಗ ಭಾರತ್ ಜೋಡೊ ಸಂಘಗಳ ಮೂಲಕ ರಾಜ್ಯದ ಜನರಿಗೆ ಕಿವಿ ಹೂ ಮುಡಿಸಿ ಅಧಿಕಾರಕ್ಕೆ ಬರಬಹುದು ಎಂದು ಹೊರಟಿದೆ. ಆದರೆ ಪ್ರಧಾನಿ ಮೋದಿ ಅವರು 2047ರ ವೇಳೆಗೆ ವಿಕಸಿತ ಭಾರತ ಆಗಬೇಕು, ದೇಶ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾಣಬೇಕು, ಸಮಾಜದ ಕಟ್ಟಕಡೆಯ ಪ್ರಜೆಗೂ ನ್ಯಾಯ ಸಿಗಬೇಕು ಎಂಬ ಇಚ್ಛಾಶಕ್ತಿ ಹೊಂದಿದ್ದಾರೆ. ನಾನು ಪ್ರಧಾನಿ ಅಲ್ಲ ಪ್ರಧಾನ ಸೇವಕ ಎಂಬ ಭಾವವನೆಯಿಂದ ಭಾರತವನ್ನು ಮುನ್ನಡೆಸುತ್ತಿದ್ದಾರೆ ಎಂದು ಬಣ್ಣಿಸಿದರು.

**ಹಿಂದುಳಿದ ಸಮಾಜಕ್ಕೆ ಆದ್ಯತೆ ನೀಡಿದೆ:** ಬಿಜೆಪಿ ಸರಕಾರದಲ್ಲಿ ಬಿ.ಎಸ್.ಯಡಿಯೂರಪ್ಪ ಅವರು ಸಿಎಂ ಇದ್ದಾಗ ಹಿಂದುಳಿದ ಸಮುದಾಯಗಳಿಗೆ ನ್ಯಾಯ ಸಲ್ಲಿಸಿದ್ದರು. ಕೇಂದ್ರದಲ್ಲಿ ಮೋದಿ ಅವರ ಸಂಪುಟದ 71 ಸಚಿವರಲ್ಲಿ 37 ಸಚಿವರು ಹಿಂದುಳಿದ ಸಮುದಾಯದವರಿದ್ದಾರೆ. ವಿಶ್ವಕರ್ಮ ಸೇರಿದಂತೆ ಹಲವಾರು ಯೋಜನೆಗಳನ್ನು ಜಾರಿ ಮಾಡಿದ್ದಾರೆ ಎಂದು ಗಮನ ಸೆಳೆದರು.

**ಗೊಲ್ಲ ಸಮುದಾಯಕ್ಕೆ ಆದ್ಯತೆ:** ಸ್ವಾಭಿಮಾನಕ್ಕೆ ಇರುವ ಮತ್ತೊಂದು ಹೆಸರು ಗೊಲ್ಲ ಸಮುದಾಯ. ಅವರಲ್ಲಿ ಬಡತನ ಇರಬಹುದು ಆದರೆ ಸ್ವಾಭಿಮಾನಿಗಳು. ಎಸ್‌ಸಿ/ಎಸ್‌ಟಿಗಳಿಗೆ ಮೀಸಲಾತಿಯಂತೆ ಗೊಲ್ಲ ಸಮುದಾಯಕ್ಕೂ ಅವಕಾಶ ಸಿಗಬೇಕು. ಇದಕ್ಕಾಗಿ ಬಿಜೆಪಿ ಮುಂದೆ ಪ್ರಯತ್ನ ಮಾಡಲಿದೆ. ಕಾಂಗ್ರೆಸ್ ರಾಜ್ಯದಲ್ಲಿ ಎಲ್ಲಾ ಸಮುದಾಯಗಳಿಗೆ ಅನ್ಯಾಯ ಮಾಡ್ತಾ ಇದೆ ಎಂದರು.

ಗೊಲ್ಲ ಸಮುದಾಯ ಕೂಡ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮುಂದೆ ಬರಬೇಕು. ಅವರಿಗೂ ರಾಜಕೀಯ ಪ್ರಾತಿನಿಧ್ಯ ಸಿಗಬೇಕು. ಮೀಸಲಾತಿ ಬಗ್ಗೆ ಚಿವುಟುವ ಕಾಂಗ್ರೆಸ್ ಮತ್ತೊಂದು ಕಡೆ ಕಣ್ಣೀರು ಒರೆಸುವ ನಾಟಕ ಮಾಡುತ್ತಿದೆ ಎಂದು ಟೀಕಿಸಿದರು.

# ತೃಪ್ತಿಯ ಜೀವನಕ್ಕೆ ಶರಣರ ಪುರಾಣ ಅಗತ್ಯ: ಮುಪ್ಪಿನ ಬಸವಲಿಂಗ ಶ್ರೀ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:** ನಾವೆಲ್ಲರೂ ಒಗ್ಗೂಡಿ ಸಾಗಿದಾಗ ಸಮಾಜವು ಉನ್ನತ ಸ್ಥಾನಕ್ಕೇರಲು ಸಾಧ್ಯ. ಮಕ್ಕಳನ್ನು ಸನ್ಮಾನಿಸುವ ಮೂಲಕ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ. ಶರಣರು ಹಾಗೂ ಸಂತರು ನೀಡಿದ ಮಹತ್ವದ ಚಿಂತನೆಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕುದರಿಮೋತಿ-ಮೈಸೂರು ಮಠದ ಶ್ರೀ ಮ.ನಿ.ಪ್ರ.ಸ್ವ ಜಗದ್ಗುರು ವಿಜಯಮಹಾಂತ ಮಹಾಸ್ವಾಮಿಗಳು ಹೇಳಿದರು.

ಪಟ್ಟಣದಲ್ಲಿ ವೀರಶೈವ-ಲಿಂಗಾಯತ ಸಮಾಜ ಗಜೇಂದ್ರಗಡ-ಉಣಚಗೇರಿ ವತಿಯಿಂದ ಒಂದು ತಿಂಗಳ ಕಾಲ ನಡೆದ ನಾಲತ್ವಾಡ ಶ್ರೀ ವೀರೇಶ್ವರ ಶಿವಶರಣರ ಪುರಾಣದ ಮಹಾ ಮಂಗಲೋತ್ಸವ ಕಾರ್ಯಕ್ರಮದಲ್ಲಿ ಪಾವನ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಶರಣರ ಕಾಯಕ ತತ್ವವನ್ನು ಪ್ರತಿಯೊಬ್ಬರೂ ಪಾಲಿಸಬೇಕು. ಆಧ್ಯಾತ್ಮಿಕ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಜೀವನಶೈಲಿಯಲ್ಲಿ ಉತ್ತಮ ಬದಲಾವಣೆ ತರಲು ಸಾಧ್ಯವಾಗುತ್ತದೆ. ಸಮಾಜದ ಅಭಿವೃದ್ಧಿಗೆ ಪ್ರತಿಯೊಬ್ಬರೂ ತಮ್ಮದೇ ಆದ ಕೊಡುಗೆ ನೀಡಬೇಕು ಎಂದರು.

ಬಳಿಕ ಶ್ರೀ ಅನ್ನದಾನೇಶ್ವರ ಸಂಸ್ಥಾನಮಠ, ಹಾಲಕೇರಿ-ಹೊಸಪೇಟೆಯ ಪರಮಪೂಜ್ಯ ಶ್ರೀ ಮ.ನಿ.ಪ್ರ.ಸ್ವ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಇತಿಹಾಸವನ್ನು ಅವಲೋಕಿಸಿದಾಗ ದೇಶದ ಮೂಲೆಮೂಲೆಗಳಲ್ಲಿ ನೂರಾರು ಸಂತರು ಹಾಗೂ ಶರಣರು ಸಮಾಜಕ್ಕೆ ದಾರಿದೀಪವಾಗಿರುವುದು ಕಂಡುಬರುತ್ತದೆ. ಮಹಾತ್ಮರ ಜೀವನದಲ್ಲಿ ಬೆಳಕಿನ ದಾರಿ ಕಾಣಿಸಿದರೆ, ಸಾಮಾನ್ಯರ ಬದುಕಿನಲ್ಲಿ ಹಲವು ಬಾರಿ ಅಜ್ಞಾನ ಹಾಗೂ ಅತೃಪ್ತಿಯ ಕತ್ತಲು ಆವರಿಸುತ್ತದೆ. ಇಂತಹ ಕತ್ತಲೆಯನ್ನು ದೂರ ಮಾಡಲು ಶರಣರ ಪುರಾಣ ಹಾಗೂ ಅವರ ಜೀವನ ಸಂದೇಶಗಳನ್ನು ಆಲಿಸುವುದು ಅಗತ್ಯವಾಗಿದೆ ಎಂದರು.




ಮನುಷ್ಯನ ದುಃಖಕ್ಕೆ ಅತೃಪ್ತಿಯೇ ಪ್ರಮುಖ ಕಾರಣ. ಹೀಗಾಗಿ ಪ್ರತಿಯೊಬ್ಬರೂ ಸಂತೃಪ್ತ ಜೀವನ ನಡೆಸುವ ಗುರಿಯನ್ನು ಹೊಂದಬೇಕು. ವ್ಯಕ್ತಿ ಸಂತೃಪ್ತನಾದಾಗ ಕುಟುಂಬ ಹಾಗೂ ಸಮಾಜವೂ ಸಂತೃಪ್ತಿಯತ್ತ ಸಾಗಲು ಸಾಧ್ಯವಾಗುತ್ತದೆ. ನಾಲತ್ವಾಡದಲ್ಲಿ ಶ್ರೀ ವೀರೇಶ್ವರ ಶಿವಶರಣರಿಗೆ ಹಲವು ತೊಂದರೆಗಳನ್ನು ನೀಡಲಾಯಿತು. ಆದರೆ ಅವುಗಳನ್ನು ಮೆಟ್ಟಿನಿಂತ ಅವರು ನಾಡಿನಲ್ಲಿ ಅನೇಕ ಸಾಮಾಜಿಕ ಹಾಗೂ ಧಾರ್ಮಿಕ ಬದಲಾವಣೆಗಳಿಗೆ ಕಾರಣರಾದರು. ಅವರ ಜೀವನಾದರ್ಶಗಳು ಇಂದಿಗೂ ಸಮಾಜಕ್ಕೆ ಮಾರ್ಗದರ್ಶನ ನೀಡುತ್ತಿವೆ ಎಂದರು.

ಯಲಬುರ್ಗಾ ಶ್ರೀಧರ ಮುರಡಿಮಠ ಹಾಗೂ ಗಡದಪ್ಪನಮಠದ ಶ್ರೀ ಬಸವಲಿಂಗ ಶಿವಾಚಾರ್ಯರು ಸಾನಿಧ್ಯ ವಹಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವೀರಶೈವ-ಲಿಂಗಾಯತ ಸಮಾಜದ ಅಧ್ಯಕ್ಷ ಸಿದ್ದಪ್ಪ ಬಂಡಿ ವಹಿಸಿ ಮಾತನಾಡಿದ ಅವರು, ಶ್ರೀಮಠದ ಕಾರ್ಯಚಟುವಟಿಕೆಗಳಲ್ಲಿ ಸಮಾಜದ ಹಿರಿಯರು, ಯುವಕರು ಹಾಗೂ ಮಹಿಳೆಯರನ್ನು ಒಗ್ಗೂಡಿಸಿಕೊಂಡು ಕಾರ್ಯನಿರ್ವಹಿಸುತ್ತಾ ಬಂದಿದ್ದೇವೆ. ಒಂದು ತಿಂಗಳ ಕಾಲ ನಡೆದ ಪುರಾಣದಲ್ಲಿ ಸಮಾಜದ ಪ್ರತಿಯೊಬ್ಬರ ಸೇವೆಯೂ ಪ್ರಮುಖವಾಗಿದೆ. ಪುರಾಣಕ್ಕೆ ವಿವಿಧ ರೀತಿಯಲ್ಲಿ ಅಡ್ಡಿ-ಆತಂಕಗಳು ಎದುರಾದರೂ ಶ್ರೀಮಠದ ಭಕ್ತರು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿ ಮಠದ ಆವರಣದಲ್ಲಿ ಅಗತ್ಯ ವ್ಯವಸ್ಥೆಗಳನ್ನು ಪೂರ್ಣಗೊಳಿಸಿ ಪುರಾಣವನ್ನು ಯಶಸ್ವಿಯಾಗಿ ನೆರವೇರಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಜಂಗಮಶ್ರೀ ಪ್ರಶಸ್ತಿ ಪಡೆದ ಶಿವಕುಮಾರ ಕೋರಧ್ಯಾನಮಠ ಅವರನ್ನು ಸನ್ಮಾನಿಸಲಾಯಿತು. 2025□26ನೇ ಸಾಲಿನಲ್ಲಿ ನಿವೃತ್ತರಾದ ಸ್ಥಳೀಯ ನೌಕರರು ಹಾಗೂ ಎಸ್ಎಸ್ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಬಳಿಕ ಮಲ್ಲಯ್ಯಸ್ವಾಮಿ ಗುರುಸ್ಥಳಮಠ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಐ.ಎಸ್. ಪಾಟೀಲ, ಉಮೇಶ ಮೆಣಸಗಿ ಹಾಗೂ ಎಸ್.ಎಸ್. ವಾಲಿ ಮಾತನಾಡಿದರು.

ಮಹಾ ಮಂಗಲೋತ್ಸವದಲ್ಲಿ ಪುರಾಣ ಸಮಿತಿ ಅಧ್ಯಕ್ಷ ಸಂಗಪ್ಪ ಕುಂಬಾರ, ಅಪ್ಪು ಮತ್ತಿಕಟ್ಟಿ, ಉಮೇಶ ಮೆಣಸಗಿ, ಈಶಪ್ಪ ಮ್ಯಾಗೇರಿ, ಶಿವಬಸಪ್ಪ ಡೊಳ್ಳಿನ, ಬಾಳು ಕುಂಬಾರ, ಹೇಮರೆಡ್ಡಿ ದೇವರೆಡ್ಡಿ, ವೀರಪ್ಪ ತಾಳಿಕೋಟಿ, ನಿಂಗಪ್ಪ ಹೂಗಾರ, ಅಮರೇಶ ಗಾಣಗೇರ, ಕಳಕಯ್ಯ ಸಾಲಿಮಠ, ಎಸ್.ಎಸ್. ನರೇಗಲ್, ಮಹಿಳಾ ಘಟಕದ ಅಧ್ಯಕ್ಷೆ ಕೀರ್ತಿ ಬಸವರಾಜ ಕೊಟಗಿ ಸೇರಿದಂತೆ ಸಮಾಜದ ಮುಖಂಡರು, ಮಹಿಳೆಯರು ಹಾಗೂ ಭಕ್ತರು ಉಪಸ್ಥಿತರಿದ್ದರು.

ಸತ್ಯಮಿಥ್ಯ
ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

SATYA MITHI
Kannada Daily Morning

# ವೀರಭದ್ರೇಶ್ವರ ರಥೋತ್ಸವಕ್ಕೆ ಸಾವಿರಾರು ಭಕ್ತರ ಸಾಕ್ಷಿ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
ಪಟ್ಟಣದ ಇತಿಹಾಸ ಪ್ರಸಿದ್ಧ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಶನಿವಾರ ಸಂಜೆ ನಡೆದ ಅದ್ದೂರಿ ರಥೋತ್ಸವವು ಸಾವಿರಾರು ಭಕ್ತರ ಭಕ್ತಿ, ಶ್ರದ್ಧೆ ಹಾಗೂ ಸಂಭ್ರಮದ ಅಪೂರ್ವ ಕ್ಷಣಗಳಿಗೆ ಸಾಕ್ಷಿಯಾಯಿತು. ಅಲಂಕೃತ ತೇರಿನತ್ತ ನೆಟ್ಟ ನೂರಾರು ಕಣ್ಣುಗಳು, ಕೈಯಲ್ಲಿ ಆರತಿ ತಟ್ಟೆ ಹಿಡಿದು ಸಾಗಿದ ಮಹಿಳೆಯರು, ಮೊಳಗಿದ ಜಯಘೋಷಗಳು ಹಾಗೂ ವಾದ್ಯಗಳ ನಾದದಿಂದ ಪಟ್ಟಣವೇ ಭಕ್ತಿಸಾಗರವಾಗಿ ಕಂಗೊಳಿಸಿತು.

ಹಿರೇಮಠದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು, ಹಾಲಕೆರೆ ಸಂಸ್ಥಾನಮಠದ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳ ಅವರ ಅಮೃತ ಹಸ್ತದೊಂದಿಗೆ ಕೇಸರಿ ಧ್ವಜ ಹಿಡಿದು ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ತೇ-ೀರು ಚಲನೆ ಆರಂಭವಾಗುತ್ತಿದ್ದಂತೆಯೇ ಭಕ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತು.

ದೇವಸ್ಥಾನದ ಆವರಣದಿಂದ ಅಲಂಕೃತ ರಥ ಹೊರಟ ಕ್ಷಣದಿಂದಲೇ ರಸ್ತೆಯ ಇಕ್ಕೆಲಗಳಲ್ಲಿ ಭಕ್ತರ ದಂಡೇ ನೆರೆದಿತ್ತು. ರಥ ಸಾಗುವ ಮಾರ್ಗದುದ್ದಕ್ಕೂ ಭಕ್ತರು ಬಾಳೆಹಣ್ಣು, ಹೂವುಗಳನ್ನು ರಥದ ಮೇಲೆ ಅರ್ಪಿಸಿ ತಮ್ಮ ಭಕ್ತಿಭಾವ ಮೆರೆದರು. 'ಹರ ಹರ ಮಹಾದೇವ', 'ವೀರಭದ್ರ ಮಹಾರಾಜ್ ಕೀ ಜೈ' ಎಂಬ ಜಯಘೋಷಗಳು ಮೊಳಗುತ್ತಿದ್ದಂತೆ ವಾತಾವರಣದಲ್ಲಿ ಆಧ್ಯಾತ್ಮಿಕ ಕಂಪನ ಮೂಡಿತು.

ಮಹಿಳೆಯರು ಕೈಯಲ್ಲಿ ಆರತಿ ತಟ್ಟೆ ಹಿಡಿದು ತೇರಿನೊಂದಿಗೆ ಸಾಗಿದ್ದು ರಥೋತ್ಸವದ ವೈಭವಕ್ಕೆ ಮತ್ತಷ್ಟು ಮೆರುಗು ನೀಡಿತು. ಮಕ್ಕಳು, ಯುವಕರು, ವೃದ್ಧರು ಸೇರಿದಂತೆ ಎಲ್ಲ ವಯೋಮಾನದ ಭಕ್ತರು ಉತ್ಸಾಹದಿಂದ ಪಾಲ್ಗೊಂಡರು. ಡೊಳ್ಳು, ಭಜನೆ ಹಾಗೂ ವಿವಿಧ ವಾದ್ಯಗಳ ನಾದಕ್ಕೆ ಹೆಜ್ಜೆ ಹಾಕಿದ ಭಕ್ತರು ಸಂಭ್ರಮಿಸಿದರು.

ರಥ ಸಾಗುವ ದಾರಿಯುದ್ದಕ್ಕೂ ಮನೆಗಳ ಮುಂದೆ ಹಾಗೂ ಪ್ರಮುಖ ಸ್ಥಳಗಳಲ್ಲಿ ಭಕ್ತರು ರಥಕ್ಕೆ ಪೂಜೆ ಸಲ್ಲಿಸಿ, ಹೂವುಗಳನ್ನು ಅರ್ಪಿಸಿ ನಮಿಸಿದರು. ಹಲವರು ತಮ್ಮ ಹರಕೆಗಳನ್ನು ತೀರಿಸಿಕೊಂಡು ಶ್ರೀ ವೀರಭದ್ರೇಶ್ವರನಿಗೆ ಕೃತಜ್ಞತೆ ಸಲ್ಲಿಸಿದರು. ಕೆಲವರ ಕಣ್ಣುಗಳಲ್ಲಿ ಭಕ್ತಿಯ ಕಣ್ಣೀರು, ಇನ್ನು ಕೆಲವರ ಮುಖದಲ್ಲಿ ಹರಕೆಯ ನೆರವೇರಿಕೆಯ ಸಂತಸ□ ತೇರಿನೋತ್ಸವವು ಭಕ್ತರ ಬದುಕಿನ ನಂಬಿಕೆ ಮತ್ತು ಭಾವನೆಗಳಿಗೆ ಜೀವಂತ ಸಾಕ್ಷಿಯಾಯಿತು.

ರಥವು ನಿಧಾನವಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ನಾಗರಕೆರೆ ಸಮೀಪದ ಈರಣ್ಣನ ಪಾದದವರೆಗೆ ತಲುಪಿದಾಗ ಭಕ್ತರ ಸಂಭ್ರಮ ಮತ್ತಷ್ಟು ಹೆಚ್ಚಾಯಿತು. ಚಪ್ಪಾಳೆ, ಜಯಘೋಷ ಹಾಗೂ ಭಕ್ತಿಗೀತೆಗಳ ನಡುವೆ ಭಕ್ತರು ರಥವನ್ನು ಬರಮಾಡಿಕೊಂಡರು.

ರಥೋತ್ಸವದ ಹಿನ್ನೆಲೆಯಲ್ಲಿ ಪಟ್ಟಣದ ಪ್ರಮುಖ ಬೀದಿಗಳು ಜನರಿಂದ ತುಂಬಿ ತುಳುಕುತ್ತಿದ್ದವು. ಎಲ್ಲೆಡೆ ಜಾತ್ರೆಯ ಸಡಗರ, ಭಕ್ತಿಗೀತೆಗಳ ಮೊಳಗು, ಡೊಳ್ಳಿನ ನಾದ ಹಾಗೂ ಜಯಘೋಷಗಳು ಕೇಳಿಬರುತ್ತಿದ್ದವು. ಹಲವು ವರ್ಷಗಳಿಂದ ನಡೆದುಕೊಂಡು ಬಂದಿರುವ ಧಾರ್ಮಿಕ ಪರಂಪರೆಯನ್ನು ಮುಂದುವರಿಸುವ ಈ ತೇರಿನೋತ್ಸವವು ನರೇಗಲ್ಲಿನ ಜನರ ಭಕ್ತಿ ಮತ್ತು ಸಾಮೂಹಿಕ ಒಗ್ಗಟ್ಟಿನ ಪ್ರತೀಕವಾಗಿ ಕಂಗೊಳಿಸಿತು.

ಸುತ್ತಮುತ್ತಲಿನ ಗ್ರಾಮಗಳಿಂದಲೂ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರು. ಬಂಧು-ಬಳಗ ಹಾಗೂ ಸ್ನೇಹಿತರೊಂದಿಗೆ ಆಗಮಿಸಿದ ಜನರು ರಥೋತ್ಸವದ ವೈಭವವನ್ನು ಕಣ್ತುಂಬಿಕೊಂಡರು. ಹಿರಿಯರು ಮಕ್ಕಳಿಗೆ ಜಾತ್ರೆಯ ಮಹತ್ವವನ್ನು ವಿವರಿಸುತ್ತಿದ್ದ ದೃಶ್ಯವೂ ಕಂಡುಬಂತು. ಒಟ್ಟಾರೆ, ಶ್ರೀ ವೀರಭದ್ರೇಶ್ವರನ ತೇರಿನೋತ್ಸವವು ಕೇವಲ ರಥದ ಸಂಚಾರವಾಗದೆ, ಭಕ್ತಿ, ಪರಂಪರೆ, ನಂಬಿಕೆ, ಕುಟುಂಬ ಬಂಧ ಹಾಗೂ ಊರಿನ ಒಗ್ಗಟ್ಟನ್ನು ಒಂದೇ ಕಡೆ ಸೇರಿಸಿದ ಅಪೂರ್ವ ಧಾರ್ಮಿಕ ಸಂಭ್ರಮವಾಗಿ ಮೂಡಿಬಂತು. ರಥ ಸಾಗಿದ ದಾರಿಯುದ್ದಕ್ಕೂ ಮೊಳಗಿದ ಜಯಘೋಷಗಳು ಹಾಗೂ ಭಕ್ತರ ಮುಖದಲ್ಲಿದ್ದ ಸಂತಸ ಜಾತ್ರೆಯ ಸಾರ್ಥಕತೆಯನ್ನು ಸಾರಿದವು.



**ಭಕ್ತಿಯ ಹೊನಲು ಹರಿಸಿದ ತೇರಿನೋತ್ಸವ; ಜಯಘೋಷದೊಂದಿಗೆ ಸಂಭ್ರಮಿಸಿದ ಭಕ್ತ ಸಮೂಹ**

## 18 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಮತದಾರರ ಗುರುತಿನ ಚೀಟಿ: ಜಾಗೃತಿ

**ಸತ್ಯಮಿಥ್ಯ ಸುದ್ದಿಮೂಲ ಮುಗಳಖೋಡ:**
ಸಮೀಪದ ಹಾರೂಗೇರಿಯ .ಶ್ರೀ ಸಿದ್ದೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಸಂಯೋಗದಲ್ಲಿ 18 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಮತದಾರರ ಗುರುತಿನ ಚೀಟಿ ಮಾಡಿಸುವ ಉದ್ದೇಶದಿಂದ ವಿದ್ಯಾರ್ಥಿಗಳಿಂದ ಅಗತ್ಯ ದಾಖಲೆಗಳನ್ನು ಸಂಗ್ರಹಿಸುವ ಕಾರ್ಯ ನಡೆಯಿತು. ಇದೇ ಸಂದರ್ಭದಲ್ಲಿ ಮತದಾನದ ಮಹತ್ವ ಹಾಗೂ ಮತದಾರರ ಗುರುತಿನ ಚೀಟಿಯ ಅಗತ್ಯತೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ಆರ್. ಎಸ್. ಶೇಗುನಸಿ ಮಾತನಾಡಿ, 18 ವರ್ಷ ಪೂರ್ಣಗೊಂಡ ಪ್ರತಿಯೊಬ್ಬ ಯುವಕ-ಯುವತಿಯೂ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಂಡು ಮತದಾರರ ಗುರುತಿನ ಚೀಟಿ ಪಡೆಯಬೇಕು. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಯುವಜನರ ಪಾಲ್ಗೊಳ್ಳುವಿಕೆ ಅತ್ಯಂತ ಮಹತ್ವದ್ದಾಗಿದ್ದು, ಪ್ರತಿಯೊಬ್ಬರೂ ತಮ್ಮ ಮತದಾನದ ಹಕ್ಕನ್ನು ಜವಾಬ್ದಾರಿಯಿಂದ ಚಲಾಯಿಸಬೇಕು ಎಂದು ಹೇಳಿದರು.

ಅತಿಥಿಗಳಾಗಿ ಆಗಮಿಸಿದ್ದ ಪ್ರೊ. ಆರ್. ಡಿ. ಗಸ್ತಿ ಮಾತನಾಡಿ, ಮತದಾನವು ಪ್ರತಿಯೊಬ್ಬ ನಾಗರಿಕನ ಹಕ್ಕು ಮತ್ತು ಕರ್ತವ್ಯವಾಗಿದೆ. ವಿದ್ಯಾರ್ಥಿ ಜೀವನದಲ್ಲಿಯೇ ಮತದಾನದ ಕುರಿತು ಜಾಗೃತಿ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಪ್ರೊ. ಟಿ. ಎಸ್. ವಂಟಗುಡಿ ಮಾತನಾಡಿ, ಅರ್ಹ ವಿದ್ಯಾರ್ಥಿಗಳು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ನೋಂದಾಯಿಸಿಕೊಳ್ಳುವುದರ ಜೊತೆ-ಗೆ, ಇತರರಲ್ಲಿಯೂ ಮತದಾನದ ಕುರಿತು ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಕಾರ್ಯಕ್ರಮವನ್ನು ಪ್ರೊ. ಎಂ. ಬಿ. ಹೊಸಪೇಟಿ ನಿರೂಪಿಸಿ, ವಂದಿಸಿದರು.

ಈ ಸಂದರ್ಭದಲ್ಲಿ ಮಹೇಶ್ ಕನದಾಳ, ನೀಲಾವತಿ ಚಿನ್ನಕಟ್ಟೆ, ಮಲ್ಲೇಶ ಕಾಂಬಳೆ, ಸಂಜು ಕಾಂಬಳೆ, ಸವಿತಾ ಕಾಂಬಳೆ, ಸಂತೋಷ ಕಾಂಬಳೆ ಸೇರಿದಂತೆ ಪದವಿ ಹಾಗೂ ಪದವಿ ಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



## ಐತಿಹಾಸಿಕ ಚಂದ್ರಮೌಳೇಶ್ವರ ದೇವಸ್ಥಾನದಲ್ಲಿ ಇಂದು ರುದ್ರಾಭಿಷೇಕ ಕಾರ್ಯಕ್ರಮ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:**
ನಗರದ ಬೂದಿಹಾಳ ಓಣಿಯ ಶ್ರೀ ಚಂದ್ರಮೌಳೇಶ್ವರ ದೇವಸ್ಥಾನ ಟ್ರಸ್ಟ್ ಕಮಿಟಿಯವರ ವತಿಯಿಂದ ಇಂದು ರವಿವಾರ ಬೆಳಿಗ್ಗೆ ಶ್ರೀ ಚಂದ್ರಮೌಳೇಶ್ವರ ದೇವರಿಗೆ ಮಹಾರುದ್ರಾಭಿಷೇಕ ಹಾಗೂ ಮಧ್ಯಾಹ್ನ ಅನ್ನ ಸಂತರ್ಪಣೆ ಕಾರ್ಯಕ್ರಮವಿರುತ್ತದೆ ಆದಕಾರಣ ಭಕ್ತಾದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲು ದೇವಸ್ಥಾನ ಕಮೀಟಿಯವರು ತಿಳಿಸಿದ್ದಾರೆ.

## ಬಿರಾಲಿಂಗೇಶ್ವರನಿಗೆ ಗಂಗಾ ಸ್ನಾನ ಭೀಮಾನದಿ ತೀರದಲ್ಲಿ ಭಕ್ತರ ದಂಡು

**ಸತ್ಯಮಿಥ್ಯ ಸುದ್ದಿಮೂಲ ಮುದ್ದೇಬಿಹಾಳ:**
ಇಂಡಿ ತಾಲೂಕಿನ ಬೆನಕನಹಳ್ಳಿ ಗ್ರಾಮದ ಶ್ರೀ ಬೀರಲಿಂಗೇಶ್ವರ ಜಾತ್ರಾಮಹೋತ್ಸವದ ಅಂಗವಾಗಿ ಶ್ರಾವಣ ಮಾಸದ ಕೊನೆಯದಾಗಿ ಬೆನಕನ ಅಮವಾಸ್ಯೆಯಂದು ಲಚ್ಯಾಣ ಸಮೀಪದ ಬರುಡಗಿಯ ಗ್ರಾಮದ ಹತ್ತಿರ ಭೀಮಾನದಿಯ ದಡದಲ್ಲಿ ಭಕ್ತರು ಭೀಮಾನದಿಯ ಸ್ನಾನ ಮಾಡಿ ಶ್ರೀ ಬೀರಲಿಂಗೇಶ್ವರ ಪಲ್ಲಕ್ಕಿ ಮತ್ತು ಮೂರ್ತಿಯನ್ನು ಗಂಗಸ್ನಾನ ಮಾಡಿಸಿದರು. ನಂತರ ಬೀರಲಿಂಗೇಶ್ವರ ಮತ್ತು ಎಲ್ಲಮ್ಮದೇವಿ ಪೂಜಾರಿಗಳಾದ ಬಸವರಾಜ ನಾಗಪ್ಪ ಬೆನಕನಳ್ಳಿ, ಸಂಗೋಗಿ, ಮಾಳಪ್ಪ ಪೂಜಾರಿ, ಸಿದ್ರಾಯ ಪೂಜಾರಿ, ಅಪ್ಪಣ್ಣ ಪೂಜಾರಿ ಗಳು ಗುಂಡು, ಹಲಗ,ಹತಾರ ಗಳಿಂದ ಆಟ ಆಡಿ ಮುಂದಿನ ಮಳೆ-ಬೆಳೆಯ ಬಗ್ಗೆ ಶಿವನುಡಿ ಹೇಳಿದರು. ನಂತರ ಬಂದ ಭಕ್ತರಿಗೆ ಹಣ್ಣು- ಪ್ರಸಾದ ವಿತರಣೆ ಮಾಡಿದರು.ಭೀಮಾನದಿಯ ಗಂಗಾ ಸ್ನಾನಕ್ಕಾಗಿ ಪಲ್ಲಕ್ಕಿಯ ಜೋತೆಗೆ ಸುತ್ತಮುತ್ತಲಿನ ಗ್ರಾಮದ ಭಕ್ತರು ಸೇರಿದಂತೆ ಮುದ್ದೇಬಿಹಾಳ, ವಿಜಯಪುರ, ಬಾಗಲಕೋಟ ಜಿಲ್ಲೆಯ ಭಕ್ತರು ಸೇರಿದ್ದರು. ಪಲ್ಲಕ್ಕಿಯು ಹೋಗುವ ವೇಳೆದಲ್ಲಿ ಭಕ್ತರು ಗಂಗೆಪದ ಹಾಡಿದರು. ನಂತರ ಅಡ್ಡಮಲ್ಲಗಿ ತಮ್ಮ ಭಕ್ತಿ ಸಮರ್ಪಣೆ ಮಾಡಿದರು.



# ಸ್ಥಳೀಯ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಅಧಿಕಾರಿಗಳ ಭರವಸೆ

### ಗಜೇಂದ್ರಗಡ ತಾಲೂಕಿನ ರಾಂಪೂರದಲ್ಲಿ ಪ್ರಜಾ ಸೇವಾ ಕಾರ್ಯಕ್ರಮ: 80ಕ್ಕೂ ಹೆಚ್ಚು ಅರ್ಜಿ ಸ್ವೀಕಾರ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:**
ಗ್ರಾಮೀಣ ಭಾಗದ ಜನರ ಸಮಸ್ಯೆಗಳನ್ನು ಸ್ಥಳದಲ್ಲೇ ಆಲಿಸಿ, ಸಾಧ್ಯವಾದಷ್ಟು ಶೀಘ್ರ ಪರಿಹಾರ ಒದಗಿಸುವ ನಿಟ್ಟಿನಲ್ಲಿ ತಾಲೂಕು ಆಡಳಿತ ಮುಂದಾಗಿದೆ. ಇದರ ಅಂಗವಾಗಿ ತಾಲೂಕು ಆಡಳಿತ ಗಜೇಂದ್ರಗಡ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ರಾಂಪೂರ ಗ್ರಾಮ ಪಂಚಾಯಿತಿಯಲ್ಲಿ ಹೋಬಳಿ ಮಟ್ಟದ ಪ್ರಜಾ ಸೇವಾ, ಸಾರ್ವಜನಿಕ ಅಹವಾಲು ಸ್ವೀಕಾರ ಹಾಗೂ ಸ್ಥಳದಲ್ಲೇ ಪರಿಹಾರ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ರಾಂಪೂರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ತಮ್ಮ ಸಮಸ್ಯೆಗಳನ್ನು ಅಧಿಕಾರಿಗಳ ಮುಂದಿಟ್ಟರು. 'ನಮ್ಮ ಹೊಲ-ನಮ್ಮ ರಸ್ತೆ', ಸಮರ್ಪಕ ಬಸ್ ಸೌಲಭ್ಯ, ವಿದ್ಯುತ್ ಸಮಸ್ಯೆ, ವಿಬಿಜಿಆರ್‌ಎಂ ಕಾಮಗಾರಿ, ರಸ್ತೆ ಸೇರಿದಂತೆ ಮೂಲಭೂತ ಸೌಕರ್ಯಗಳ ಕೊರತೆ ಸೇರಿದಂತೆ ವಿವಿಧ ಬೇಡಿಕೆಗಳ ಕುರಿತು 80ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾದವು.

**ಅಧಿಕಾರಿಗಳಿಂದ ಸ್ಥಳದಲ್ಲೇ ಸ್ಪಂದನೆ:** ಸಾರ್ವಜನಿಕರಿಂದ ಸ್ವೀಕರಿಸಲಾದ ಪ್ರತಿಯೊಂದು ಅರ್ಜಿಯನ್ನು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಪರಿಶೀಲಿಸಿ, ಸಮಸ್ಯೆಯ ಸ್ವರೂಪ ಹಾಗೂ ಪರಿಹಾರದ ಸಾಧ್ಯತೆ ಕುರಿತು ಮಾಹಿತಿ ಪಡೆದುಕೊಂಡರು. ಹಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಅಧಿಕಾರಿಗಳು ಸ್ಪಂದಿಸಿದರೆ, ಉಳಿದ ಅರ್ಜಿಗಳನ್ನು ಸಂಬಂಧಿಸಿದ ಇಲಾಖೆಗೆ ರವಾನಿಸಿ ನಿಯಮಾನುಸಾರ ಕ್ರಮ ಕೈಗೊಳ್ಳುವ ಭರವಸೆ ನೀಡಲಾಯಿತು. ಸಾರ್ವಜನಿಕರಿಂದ ಬಂದಿರುವ ಅರ್ಜಿಗಳನ್ನು ಆದ್ಯತೆಯ ಮೇರೆಗೆ ಪರಿಶೀಲಿಸಿ, ಶೀಘ್ರವಾಗಿ ವಿಲೇವಾರಿ ಮಾಡಲಾಗುವುದು. ಜನರ ಸಮಸ್ಯೆಗಳಿಗೆ ಆಡಳಿತ ಸ್ಪಂದಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ತಹಶೀಲ್ದಾರ್ ಕಿರಣಕುಮಾರ ಕುಲಕರ್ಣಿ ತಿಳಿಸಿದರು. ಸರ್ಕಾರದ ಯೋಜನೆಗಳು ಹಾಗೂ ಇಲಾಖೆಗಳ ಸೇವೆಗಳು ಗ್ರಾಮೀಣ ಜನರಿಗೆ ಸುಲಭವಾಗಿ ತಲುಪಬೇಕು. ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ನೇರವಾಗಿ ಅಧಿಕಾರಿಗಳ ಗಮನಕ್ಕೆ ತರುವ ಮೂಲಕ ಪರಿಹಾರ ಪಡೆದುಕೊಳ್ಳಬೇಕು ಎಂದು ಅವರು ಹೇಳಿದರು.



**ವಿವಿಧ ಇಲಾಖೆ ಅಧಿಕಾರಿಗಳ ಉಪಸ್ಥಿತಿ:** ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯಿತಿ ಎ.ಡಿ.ಬಸವರಾಜ ಬಡಿಗೇರ, ಕೆಇಬಿ ಎಇಇ ವೀರೇಶ ರಾಜೂರ, ಸಿಡಿಪಿಒ ಲಲಿತಾ ಅಳವಂಡಿ, ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿ ಅರವಿಂದ ಬಂಡಿ, ಪಿಡಿಒ ಸುಮಂಗಲಾ ಪತ್ತಾರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು. ಗ್ರಾಮೀಣ ಭಾಗದ ಜನರ ಅಹವಾಲುಗಳನ್ನು ಒಂದೇ ವೇದಿಕೆಯಲ್ಲಿ ಸ್ವೀಕರಿಸಿ, ಸಂಬಂಧಿಸಿದ ಅಧಿಕಾರಿಗಳಿಂದ ಪರಿಹಾರಕ್ಕೆ ಕ್ರಮ ಕೈಗೊಳ್ಳುವ ಮೂಲಕ ಪ್ರಜಾ ಸೇವಾ ಕಾರ್ಯಕ್ರಮ ಗಮನ ಸೆಳೆಯಿತು.

# ಸಿದ್ದಶ್ರೀ ಸೌಹಾರ್ದ ಸಹಕಾರಿ ಸಂಘದ ವಾರ್ಷಿಕ ನಿವ್ವಳ ಲಾಭಾಂಶ 41.83 ಲಕ್ಷ

**ಸತ್ಯಮಿಥ್ಯ ಸುದ್ದಿಮೂಲ ಮುಗಳಖೋಡ:**
ಪಟ್ಟಣದ ಶ್ರೀಯಲ್ಲಾಲಿಂಗೇಶ್ವರ ಶ್ರೀ ಮಠದ ಆವರಣದಲ್ಲಿ ಇರುವ ಸಿದ್ದಶ್ರೀ ಸೌಹಾರ್ದ ಸಹಾಕಾರಿ ಸಂಘದ ಸನ್ 2025-26 ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ಸೆ.10 ಗುರುವಾರದಂದು ಶ್ರೀ ಮಠದ ಆವರಣದಲ್ಲಿ ಅಧ್ಯಕ್ಷ ಬಸವರಾಜ ಜೊಪಾಟಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ ಮುಗಳಖೋಡ- ಜಿಡಗಾ ಮಠದ ಪೀಠಾಧಿಪತಿ ಹಾಗೂ ಸಿದ್ದಶ್ರೀ ಸೌಹಾರ್ದ ಸಹಕಾರಿ ಸಂಘದ ಸಂಸ್ಥಾಪಕರಾದ ಡಾ. ಮುರುಘರಾಜೇಂದ್ರ ಮಹಾಸ್ವಾಮಿಗಳು ಕಾರ್ಯಕ್ರಮ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ, ಸಭೆ ಉದ್ದೇಶಿಸಿ ಮಾತನಾಡುತ್ತಾ, ಈ ಬ್ಯಾಂಕಿನಲ್ಲಿ ಇಲ್ಲಿಯವರೆಗೆ ಸುಮಾರು 259 ಕೋಟಿ ವ್ಯವಹಾರ ನಡೆದಿದೆ ಮತ್ತು 25 ಕೋಟಿ ಠೇವಣಿ ಹಣ ಇರುತ್ತದೆ. ಮುಂದಿನ ಸಾಮಾನ್ಯ ಸಭೆಯಲ್ಲಿ ಈ ಬ್ಯಾಂಕಿನಲ್ಲಿ ಸುಮಾರು 100 ಕೋಟಿ ಠೇವಣಿ ಹಣ ಸಂಗ್ರಹವಾಗುವುದು ಎಂದು ಭವಿಷ್ಯ ನುಡಿದರು. ಇದು ಭಕ್ತರಿಗಾಗಿ ಇರುವ ಸಂಸ್ಥೆ, ಗುರುಗಳ ಪುಣ್ಯಭೂಮಿಯಲ್ಲಿರುವ ಈ ಸಂಸ್ಥೆಯಲ್ಲಿರುವ ನಿಮ್ಮ ದುಡ್ಡು ಕಾಯಲು ಶ್ರೀ ಸಿದ್ಧರಾಮ ಶಿವಯೋಗಿಗಳು, ಸದ್ಗುರು ಯಲ್ಲಾಲಿಂಗ ಮಹಾರಾಜರು ಇದ್ದಾರೆ. ದಿನದ 24 ಗಂಟೆ ಕಾರ್ಯನಿರ್ವಹಿಸುವ ಏಕೈಕ ಸಂಸ್ಥೆ ಎಂದರೆ ಅದು ಮುಗಳಖೋಡ ಶ್ರೀಮಠದ ಅಂಗಳದಲ್ಲಿರುವ ಸಿದ್ದಶ್ರೀ ಸಂಸ್ಥೆ ಮಾತ್ರ ಎಂದು ಆಶೀರ್ವಚನ ನೀಡಿದರು. ಅಧ್ಯಕ್ಷರಾದ ಬಸವರಾಜ ಜೋಪಾಟೆ ಮಾತನಾಡಿ, ಸನ್ 2025-26 ಸಾಲಿನಲ್ಲಿ ರೂ.41.83ಲಕ್ಷ ಲಾಭಾಂಶವಾಗಿದೆ. ಶ್ರೀಮಠದ ಭಕ್ತರು ಹಾಗೂ ಬಡವರು, ರೈತರಿಗೆ ಸಹಾಯಕವಾದ ಸಿದ್ಧಶ್ರೀ ಸೌಹಾರ್ದ ಸಹಕಾರಿ ಸಂಘವು ಸೌಹಾರ್ದದ ಎಲ್ಲ ನಿಯಮಗಳಿಗೆ ಅನುಗುಣವಾಗಿ ವಿವಿಧ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ ಅತಿ ಹೆಚ್ಚು ನಮ್ಮ ಬ್ಯಾಂಕಿನಲ್ಲಿ ವ್ಯವಹರಿಸಿದ ಗ್ರಾಹಕರಿಗೆ ವಿವಿಧ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಎಲ್ಲರಿಗೂ ಅನುಕೂಲವಾಗುವಂತೆ ಹೆಚ್ಚಿನ ಯೋಜನೆಗಳನ್ನು ಅಳವಡಿಸಿಕೊಳ್ಳಲಾಗುವುದು ಎಂದರು.

ನಿರ್ದೇಶಕ ಜಗದೀಶ ಬೂದಿಹಾಳ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಸಿದ್ದರಾಮೇಶ್ವರ ಸ್ವಾಮಿ, ಶ್ರೀಮತಿ ಸಂತೋಷಿ ಪಾಟೀಲ, ವೈ. ರಾಮು ವೈ. ಪರಮೇಶ, ಸದಾಶಿವ ದೇಶಿಂಗೆ ಸೇರಿದಂತೆ ಅನೇಕರು ಸಿದ್ದಶ್ರೀ ಸೌಹಾರ್ದ ಉದ್ದೇಶಿಸಿ ಮಾತನಾಡಿದರು. ಪ್ರತಿವರ್ಷ ಸಂಸ್ಥೆಯಿಂದ ನೀಡುವ ಅತ್ಯತ್ತಮ ನಿರ್ದೇಶಕ ಪ್ರಶಸ್ತಿಗೆ ಬಾಜನರಾದ ಸಿ.ಎ.ನಾಡಗೌಡ, ಶ್ರೀಮತಿ ಕೆ. ಪಾರ್ವತಿ ಜಗನಾಥ ರೆಡ್ಡಿ, ಜಗದೀಶ್ ಬೂದಿಹಾಳ ಹಾಗೂ ಹಲವು ಸದಸ್ಯರಿಗೆ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಹಾಗೂ ಬ್ಯಾಂಕಿನೊಂದಿಗೆ ಹೆಚ್ಚು ವ್ಯವಹಾರ ಹೊಂದಿದ ಗ್ರಾಹಕರಿಗೆ ಅತ್ಯತ್ತಮ ಗ್ರಾಹಕರೆಂದು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಿದ್ದಶ್ರೀ ಸೌಹಾರ್ದ ಸಹಕಾರಿ ಸಂಸ್ಥೆಯ ಸರ್ವ ಸದಸ್ಯರು ಸಿಬ್ಬಂದಿಯವರು ಗ್ರಾಹಕರು ಹಾಗೂ ಶ್ರೀಮಠದ ಭಕ್ತಾದಿಗಳು ಇದ್ದರು. ಸಭೆಯನ್ನು ಸೋಮು ಹೊರಟ್ಟಿ ನಿರೂಪಿಸಿ ವಂದಿಸಿದರು. ಅಪ್ಪಾಜಿ ಸಂಗೀತ ಕಲಾ ಬಳಗದಿಂದ ಸಂಗೀತ ಸೇವೆ ನಡೆಯಿತು.




# ಸಾವಳಗಿಯಲ್ಲಿ 100.54 ಲಕ್ಷ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

**ಸತ್ಯಮಿಥ್ಯ ಸುದ್ದಿಮೂಲ ಬಾಗಲಕೋಟೆ:**
ಜಮಖಂಡಿ ತಾಲ್ಲೂಕಿನ ಸಾವಳಗಿ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆಯ ವತಿಯಿಂದ ಕೈಗೊಳ್ಳಲಾಗುತ್ತಿರುವ ವಿವಿಧ ರಸ್ತೆ ಸುಧಾರಣೆ ಕಾಮಗಾರಿಗಳಿಗೆ ಶನಿವಾರ ಭೂಮಿಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಲಾಯಿತು.

2025-26ನೇ ಸಾಲಿನ ಸಿ.ಎಂ.ಆರ್.ಡಿ.ಪಿ. ಯೋಜನೆಯಡಿ ಸಾವಳಗಿ ಗ್ರಾಮದ ಮಧ್ಯಭಾಗದಲ್ಲಿರುವ ಚೌಕ ರಸ್ತೆಯಿಂದ ಪೊಲೀಸ್ ಠಾಣೆಯವರೆಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಕಾಂಕ್ರೀಟೀಕರಣ ಹಾಗೂ ಡಾಂಬರೀಕರಣದ ಮೂಲಕ ಅಭಿವೃದ್ಧಿಪಡಿಸುವ ಕಾಮಗಾರಿಗೆ ಚಾಲನೆ ನೀಡಲಾಯಿತು.

ಉಮರಾಣಿ ಗಲಗಲಿ ರಾಜ್ಯ ಹೆದ್ದಾರಿ-260ರ ಕಿ.ಮೀ. 26.40ರಿಂದ 27.06ರವರೆಗೆ ರಸ್ತೆ ಸುಧಾರಣೆ ಕಾಮಗಾರಿಯನ್ನೂ ಕೈಗೆತ್ತಿಕೊಳ್ಳಲಾಗಿದೆ. ಒಟ್ಟು □100.54 ಲಕ್ಷ ವೆಚ್ಚದಲ್ಲಿ ಈ ರಸ್ತೆ ಅಭಿವೃದ್ಧಿ ಕಾಮಗಾರಿಗಳು ನಡೆಯಲಿವೆ.

ನಾಡೋಜ ಶ್ರೀ ಜಗದೀಶ ಗುಡಗುಂಟಿ ಅವರು ಭೂಮಿಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು.

ರಸ್ತೆ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡ ಬಳಿಕ ಗ್ರಾಮಸ್ಥರು, ವಾಹನ ಸವಾರರು ಹಾಗೂ ಸಾರ್ವಜನಿಕರಿಗೆ ಸುಗಮ ಸಂಚಾರಕ್ಕೆ ಅನುಕೂಲವಾಗುವುದರೊಂದಿಗೆ ಸಾವಳಗಿ ಗ್ರಾಮದ ಸಂಪರ್ಕ ವ್ಯವಸ್ಥೆ ಮತ್ತಷ್ಟು ಸುಧಾರಿಸಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.



ಇದೇ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಾದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಶಂಕರ ಬಂಡಿವಡ್ಡರ, ಕಿರಿಯ ಇಂಜಿನಿಯರ್ ಸಿದ್ದಪ್ಪ ಜಂಬಗಿ, ಲೋಕೋಪಯೋಗಿ ಇಲಾಖೆ ಸಿಬ್ಬಂದಿಯಾದ ಶ್ರೀಧರ್ ವಜ್ರವಾಡ ಗ್ರಾಮದ ಹಿರಿಯರು, ಮುಖಂಡರು, ಯುವಕರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಜನರ ಸಮಸ್ಯೆಗಳಿಗೆ ತ್ವರಿತ ಪರಿಹಾರ ಕಲ್ಪಿಸಿ: ಶಾಸಕ ಜಗದೀಶ್ ಗುಡಗುಂಟಿ

## ಪ್ರಜಾಸೇವಾ ಆಂದೋಲನ ಜನಪರ ಕಾರ್ಯಕ್ರಮ; ಅಧಿಕಾರಿಗಳು ಅರ್ಜಿಗಳಿಗೆ ಆದ್ಯತೆ ನೀಡಿ

**ಸತ್ಯಮಿಥ್ಯ ಸುದ್ದಿಮೂಲ ಬಾಗಲಕೋಟೆ:**
ಸಾರ್ವಜನಿಕರ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸಿ, ಸರ್ಕಾರದ ವಿವಿಧ ಸೇವೆಗಳನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ಜಾರಿಗೊಳಿಸಿರುವ 'ಪ್ರಜಾಸೇವಾ ಆಂದೋಲನ ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ' ಕಾರ್ಯಕ್ರಮ ಜನಪರ ಹಾಗೂ ಮಹತ್ವದ ವೇದಿಕೆಯಾಗಿದೆ. ಅಧಿಕಾರಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿ, ತ್ವರಿತವಾಗಿ ಪರಿಹಾರ ಕಲ್ಪಿಸುವ ಮೂಲಕ ಕಾರ್ಯಕ್ರಮದ ಉದ್ದೇಶ ಯಶಸ್ವಿಗೊಳಿಸಬೇಕು ಎಂದು ಜಮಖಂಡಿ ಶಾಸಕ ಜಗದೀಶ್ ಗುಡಗುಂಟಿ ಹೇಳಿದರು.

ಜಮಖಂಡಿ ತಾಲೂಕಿನ ಸಾವಳಗಿ ಗ್ರಾಮದ ಶ್ರೀ ಚನ್ನಪ್ಪಣ್ಣ ನಿಂಗಪ್ಪ ನಿರಾಣಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಪ್ರಜಾಸೇವಾ ಆಂದೋಲನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾರ್ವಜನಿಕರ ಸಮಸ್ಯೆಗಳನ್ನು ನೇರವಾಗಿ ಆಲಿಸಿ, ಸ್ಥಳದಲ್ಲಿಯೇ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದು ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಈ ಆಂದೋಲನ ಮಹತ್ವದ ಪಾತ್ರ ವಹಿಸುತ್ತಿದೆ ಎಂದರು.

ಸರ್ಕಾರದ ವಿವಿಧ ಇಲಾಖೆಗಳ ನಡುವೆ ಕೆಲವೊಮ್ಮೆ ಸಮನ್ವಯದ ಕೊರತೆಯಿಂದಾಗಿ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಅರ್ಜಿಗಳನ್ನು ಕಳುಹಿಸುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದರಿಂದ ಸಾರ್ವಜನಿಕರ ಸಮಸ್ಯೆಗಳ ಪರಿಹಾರ ವಿಳಂಬವಾಗುತ್ತದೆ. ಆದರೆ ಪ್ರಜಾಸೇವಾ ಆಂದೋಲನದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಒಂದೇ ಸ್ಥಳದಲ್ಲಿ ಇರುವುದರಿಂದ, ಸಮಸ್ಯೆ ಯಾವ ಇಲಾಖೆಗೆ ಸಂಬಂಧಿಸಿದೆ ಎಂಬುದನ್ನು ತಕ್ಷಣ ಗುರುತಿಸಿ ಅಗತ್ಯ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿದೆ ಎಂದು ಹೇಳಿದರು.

ಅರ್ಜಿಗಳಿಗೆ ಸೂಕ್ತ ಪರಿಹಾರ ದೊರೆಯದೆ ಸಾರ್ವಜನಿಕರು ಪದೇಪದೇ ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಬಾರದು. ಇದರಿಂದ ಜನರಿಗೆ ತೊಂದರೆಯಾಗುವುದರ ಜೊತೆಗೆ ಆಡಳಿತ ವ್ಯವಸ್ಥೆಯ ಮೇಲಿನ ವಿಶ್ವಾಸವೂ ಕುಗ್ಗುತ್ತದೆ. ಆದ್ದರಿಂದ ಪ್ರತಿಯೊಂದು ಅರ್ಜಿಯನ್ನೂ ಗಂಭೀರವಾಗಿ ಪರಿಗಣಿಸಿ, ಸಾಧ್ಯವಾದಷ್ಟು ಶೀಘ್ರವಾಗಿ ಸಮಸ್ಯೆ ಪರಿಹರಿಸುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ ಎಂದು ಶಾಸಕ ಜಗದೀಶ್ ಗುಡಗುಂಟಿ ತಿಳಿಸಿದರು.




**15 ದಿನಗಳಲ್ಲಿ ಅರ್ಜಿ ವಿಲೇವಾರಿಗೆ ಸೂಚನೆ:** ನಂತರ ಮಾತನಾಡಿದ ಜಮಖಂಡಿ ತಹಶೀಲ್ದಾರ್ ಅನೀಲ ಬಡಿಗೇರ, ಸಾರ್ವಜನಿಕರಿಂದ ಸ್ವೀಕರಿಸುವ ಪ್ರತಿಯೊಂದು ಅರ್ಜಿಯನ್ನು ಸಂಬಂಧಿಸಿದ ಅಧಿಕಾರಿಗಳು ಗಂಭೀರವಾಗಿ ಪರಿಶೀಲಿಸಿ, ಅರ್ಜಿ ಸ್ವೀಕರಿಸಿದ 15 ದಿನಗಳೊಳಗಾಗಿ ಅರ್ಜಿದಾರರಿಗೆ ತೃಪ್ತಿಯಾಗುವ ರೀತಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

100 ಅರ್ಜಿಗಳು ಸ್ವೀಕರಿಸಲ್ಪಟ್ಟರೆ, ಸಾಧ್ಯವಾದಷ್ಟು ಅರ್ಜಿಗಳಿಗೆ ಸ್ಥಳದಲ್ಲಿಯೇ ಅಥವಾ ನಿಗದಿತ ಅವಧಿಯೊಳಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು. ಸಾರ್ವಜನಿಕರು ತಮ್ಮ ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತದೆ ಎಂಬ ವಿಶ್ವಾಸದಿಂದ ಅರ್ಜಿ ಸಲ್ಲಿಸುತ್ತಾರೆ. ಹೀಗಾಗಿ ಪ್ರತಿಯೊಂದು ಅರ್ಜಿಯ ಹಿಂದಿರುವ ಸಮಸ್ಯೆಯನ್ನು ಅರಿತು, ಅರ್ಜಿದಾರರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಬೇಕು ಎಂದರು. ಮುಂದಿನ ಹಂತದಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿಯೂ ಇದೇ ರೀತಿಯ ಕಾರ್ಯಕ್ರಮವನ್ನು ಮುಂದುವರಿಸಲಾಗುವುದು. ಸಾರ್ವಜನಿಕರಿಂದ ಸ್ವೀಕರಿಸುವ ಅರ್ಜಿಗಳಿಗೆ ಎಲ್ಲ ಇಲಾಖೆಗಳ ಅಧಿಕಾರಿಗಳು ಪ್ರಾಮುಖ್ಯತೆ ನೀಡಿ, ಸಮಸ್ಯೆಗಳನ್ನು ಆದ್ಯತೆಯ ಮೇರೆಗೆ ಪರಿಗಣಿಸಿ, ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡಬೇಕು ಎಂದು ತಿಳಿಸಿದರು.

ಪ್ರಜಾಸೇವಾ ಆಂದೋಲನದ ಮುಖ್ಯ ಉದ್ದೇಶ ಸಾರ್ವಜನಿಕರ ಸಮಸ್ಯೆಗಳನ್ನು ನೇರವಾಗಿ ಆಲಿಸಿ, ಅವುಗಳಿಗೆ ಸೂಕ್ತ ಪರಿಹಾರ ಕಲ್ಪಿಸುವುದಾಗಿದೆ. ಅಧಿಕಾರಿಗಳು ಹಾಗೂ ಸಿಬ್ಬಂದಿ ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಿ, ಸರ್ಕಾರದ ಸೇವೆಗಳು ಪರಿಣಾಮಕಾರಿಯಾಗಿ ಜನರಿಗೆ ತಲುಪುವಂತೆ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಜಮಖಂಡಿ ತಾಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ, ಸಾರ್ವಜನಿಕರು ಹಾಗೂ ಮುಖಂಡರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ಸಾರ್ವಜನಿಕರ ಅಸಮಾಧಾನ

**ಜನರ ಸಮಸ್ಯೆಗಳನ್ನು ಆಲಿಸಿ, ಸರ್ಕಾರಿ ಸೇವೆಗಳನ್ನು ಜನರ ಬಳಿಗೆ ತಲುಪಿಸುವ ಉದ್ದೇಶದ ಪ್ರಜಾಸೇವಾ ಆಂದೋಲನ ಕಾರ್ಯಕ್ರಮವನ್ನು ಸಾವಳಗಿ ಗ್ರಾಮದಿಂದ ಸುಮಾರು 2 ಕಿ.ಮೀ. ದೂರದಲ್ಲಿ ಆಯೋಜಿಸಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಯಿತು. ವಿಶೇಷವಾಗಿ ವಯೋವೃದ್ಧರು ಹಾಗೂ ದೂರದಿಂದ ಬಂದ ಸಾರ್ವಜನಿಕರು ಕಾರ್ಯಕ್ರಮದ ಸ್ಥಳ ತಲುಪಲು ತೀವ್ರ ತೊಂದರೆ ಅನುಭವಿಸಿದರು. 'ಬಾಗಿಲಿಗೆ ಬಂತು ಸರ್ಕಾರ' ಎಂಬ ಆಶಯದ ಕಾರ್ಯಕ್ರಮವನ್ನು ಜನರಿಗೆ ಸುಲಭವಾಗಿ ತಲುಪುವ ಸ್ಥಳದಲ್ಲಿ ಆಯೋಜಿಸಬೇಕಿತ್ತು. ಜನರಿಗಾಗಿ ನಡೆಯುವ ಕಾರ್ಯಕ್ರಮಕ್ಕೆ ಜನರೇ ದೂರ ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಬಾರದು ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದರು.**

# ಮೊಬೈಲ್ ಹವ್ಯಾಸದಿಂದ ದೂರವಿರಿ, ಕ್ರೀಡೆಯಲ್ಲಿ ಸಕ್ರಿಯರಾಗಿ: ಬಿಇಒ ಎಮ್. ಎಸ್. ಬಡದಾನಿ

**ಸತ್ಯಮಿಥ್ಯ ಸುದ್ದಿಮೂಲ ಮುದ್ದೇಬಿಹಾಳ:**
ಇಂದಿನ ದಿನಗಳಲ್ಲಿ ನಾವೆಲ್ಲರೂ ಮೊಬೈಲ್ ಬಳಕೆಗೆ ಮಾರುಹೋಗಿದ್ದೇವೆ. ಮುಖ್ಯವಾಗಿ ವಿದ್ಯಾರ್ಥಿಗಳು ಮೊಬೈಲ್ ಹವ್ಯಾಸಕ್ಕೆ ಒಳಗಾಗಿದ್ದು, ಇದರಿಂದ ದೂರವಿರಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಎಮ್. ಎಸ್. ಬಡದಾನಿ ಕರೆ ನೀಡಿದರು.

ಗ್ರಾಮದಬಸವಬಾಲಭಾರತಿಶಾಲೆಯಲ್ಲಿಶನಿವಾರದಂದು ನಡೆದ 2026–27ನೇ ಸಾಲಿನ ಢವಳಗಿ ಹೋಬಳಿ ಮಟ್ಟದ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು. ದಿನನಿತ್ಯದ ಮೊಬೈಲ್ ಬಳಕೆಯಿಂದ ನಮ್ಮ ನೆನಪಿನ ಶಕ್ತಿ ಮತ್ತು ಕ್ರಿಯಾಶೀಲತೆ ಕಡಿಮೆಯಾಗುತ್ತಿದೆ. ವಿದ್ಯಾರ್ಥಿಗಳು ಸದಾ ಸಕ್ರಿಯವಾಗಿರಲು ಕ್ರೀಡೆಯಲ್ಲಿ ಪಾಲ್ಗೊಳ್ಳುವುದರಿಂದ ದೇಹವು ಸದೃಢವಾಗಿರುತ್ತದೆ ಹಾಗೂ ಕೆಟ್ಟ ಹವ್ಯಾಸಗಳಿಗೆ ಒಳಗಾಗುವುದಿಲ್ಲ ಎಂದು ತಿಳಿಸಿದರು.

ಇನ್ನೋರ್ವ ಮುಖ್ಯ ಅತಿಥಿ, ತಾಳಿಕೋಟಿ ತಾಲೂಕಿನ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಬಿ. ಟಿ. ವಜ್ಜಲ ಗುರುಗಳು ಮಾತನಾಡಿ, ಮಕ್ಕಳು ದೈಹಿಕ ಮತ್ತು ಮಾನಸಿಕವಾಗಿಆರೋಗ್ಯವಾಗಿರಬೇಕೆಂದರೆಕ್ರೀಡೆಯಲ್ಲಿ ಸದಾ ಸಕ್ರಿಯವಾಗಿರಬೇಕು ಎಂದರು. ಬಿ. ಎಚ್. ಮುದ್ನೂರ ಶಾಲಾ ಶಿಕ್ಷಕರ ಸಂಘದ ಮುದ್ದೇಬಿಹಾಳ ತಾಲೂಕಾಧ್ಯಕ್ಷರು ಸಹ ಮಾತನಾಡಿದರು.

ಶ್ರೀ ಮಡಿವಾಳೇಶ್ವರ ದೇವಸ್ಥಾನದ ಮರಿದೇವರಾದ ಜಯಸೂರ್ಯ ಗದ್ದುಗೆಮಠ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಕ್ರೀಡಾ ಧ್ವಜಾರೋಹಣವನ್ನು ಎಮ್. ಜಿ. ಬಿರಾದಾರ ನೆರವೇರಿಸಿದರು. ಜಿ. ಎಸ್. ಕೋರಿ ಕ್ರೀಡಾಜ್ಯೋತಿಯನ್ನುಸ್ವೀಕರಿಸಿದರು. ಕ್ರೀಡಾಕೂಟವನ್ನು ಬಾಪುಗೌಡ ಸಂ. ಬಿರಾದಾರ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಸುರೇಶ ಬೀರಗೊಂಡ ತಾಳಿಕೋಟಿ, ಪಿಡಿಓ ಮೋಹನ ಹುಲ್ಲೂರ, ಢವಳಗಿ ತಾ.ಪಂ. ಮಾಜಿ ಸದಸ್ಯೆ ಶ್ರೀಮತಿ ಪಾರ್ವತಿ ಎಮ್. ಗುಡಿಮನಿ, ಹಿರಿಯರಾದ ಯಂಕಪ್ಪಗೌಡ ಕೋಣ್ಣೂರ, ಮಡಿವಾಳಪ್ಪ ಮೂಲಿಮನಿ, ಬಾಪುಗೌಡ ಸಂ. ಪಾಟೀಲ (ಅಂಗಡಗೇರಿ), ಮಾಂತಗೌಡ ಬಿರಾದಾರ, ಸುರೇಶ ಪಾಟೀಲ, ಗುರುನಾಥ ಸಜ್ಜನ, ಮಡಿವಾಳಪ್ಪಗೌಡ ಬಿರಾದಾರ,ನಾನಾಗೌಡಕೋಣ್ಣೂರ,ಸುಬಾಷಗುಡಿಮನಿ, ಬಿ. ಎಸ್. ಶೇಖಣ್ಣವರ, ರಮೇಶ ಮೂಲಿಮನಿ, ಎಮ್. ಕೆ. ಗುಡಿಮನಿ ಸೇರಿದಂತೆ ಢವಳಗಿ ವಲಯದ ಶಿಕ್ಷಕ ಸಿಬ್ಬಂದಿಗಳು ಹಾಗೂ ಇನ್ನಿತರರು ಉಪಸ್ಥಿತರಿದ್ದರು. ಶಿಕ್ಷಕ ಮಹೇಶ ಕೋಣ್ಣೂರ ಮತ್ತು ರಮೇಶ ಮಠಪತಿ ಅವರು ಕಾರ್ಯಕ್ರಮವನ್ನು ನಿರ್ವಹಿಸಿದರು.



# ಕುಡಾ ಹಣ ದುರುಪಯೋಗ: ಇಬ್ಬರು ಆರೋಪಿಗಳ ಜಾಮೀನು ಅರ್ಜಿ ವಜಾ

**ಸತ್ಯಮಿಥ್ಯ ಸುದ್ದಿಮೂಲ ಕೊಪ್ಪಳ:**
ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಕುಡಾ) ಲಕ್ಷಾಂತರ ರೂಪಾಯಿ ಹಣ ದುರುಪಯೋಗಪಡಿಸಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ, ಬಂಧಿತ ಆರೋಪಿ ರವೀಂದ್ರ ಕುಮಾರ ಎಂಬಾತನ ಸಹೋದರ ಹಾಗೂ ಪತ್ನಿಯ ಜಾಮೀನು ಅರ್ಜಿಯನ್ನು ಕೊಪ್ಪಳದ ಪ್ರಧಾನ ಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ವಜಾಗೊಳಿಸಿ ಆದೇಶಿಸಿದೆ.





**ಪ್ರಕರಣದ ಹಿನ್ನೆಲೆ:** ಕುಡಾ ಕಚೇರಿಯಲ್ಲಿ ದಿನಗೂಲಿ ಆಧಾರದ ಮೇಲೆ ಅಕೌಂಟ್ ಹಾಗೂ ಇ.ಎಸ್.ಟಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ರವೀಂದ್ರ ಕುಮಾರ, ಸೇವೆಯಿಂದ ಕಾರ್ಯಮುಕ್ತಗೊಂಡ ನಂತರವೂ ಪ್ರಾಧಿಕಾರದ ಆಯುಕ್ತರ ಹೆಸರಿನಲ್ಲಿದ್ದ ಕಡತದಲ್ಲಿ ಇಲ್ಲದ ಖಾತೆಗೆ ಸಾರ್ವಜನಿಕರಿಗೆ ನಿವೇಶನ ಕೊಡುವುದಾಗಿ ನಂಬಿಸಿ ಹಣ ಹಾಕಿಸಿಕೊಂಡಿದ್ದ. ನಂತರ ಆ ಖಾತೆಯ ಚೆಕ್‌ಗಳಿಗೆ ಆಯುಕ್ತರ ಹೆಸರಿನ ಸೀಲ್ ಹಾಕಿ, ತಾನೇ ಆಯುಕ್ತನೆಂದು ನಕಲಿ ಸಹಿ ಮಾಡಿ ಹಣ ನಗದೀಕರಿಸಿಕೊಂಡು ವಂಚಿಸಿದ್ದ. ಈ ಕುರಿತು ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

**ಕುಟುಂಬಸ್ಥರ ಖಾತೆಗೆ ಹಣ ವರ್ಗಾವಣೆ:** ತನಿಖೆಯ ವೇಳೆ ಮುಖ್ಯ ಆರೋಪಿ ರವೀಂದ್ರ, ತನ್ನ ಸಹೋದರ ಅನಿಲ್ ಕುಮಾರ (ಆರೋಪಿ–03) ಖಾತೆಗೆ ಒಟ್ಟು 1,49,50,000 ವರ್ಗಾಯಿಸಿರುವುದು ಪತ್ತೆಯಾಗಿದೆ. ಅಲ್ಲದೆ ತನ್ನ ಪತ್ನಿ ರಮಾ (ಆರೋಪಿ–04) ಹೆಸರಿನ ಹೆಚ್‌ಡಿಎಫ್‌ಸಿ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸಿ, ಅದರಲ್ಲಿ 15 ಲಕ್ಷವನ್ನು ಫಿಕ್ಸ್ಡ್ ಡಿಪಾಸಿಟ್ (ಎಫ್ ಡಿ ) ಮಾಡಿಸಿದ್ದ. ಜೊತೆಗೆ ಪ್ರಾಧಿಕಾರದ 8,81,500 ಹಣದಿಂದ ಪತ್ನಿಯೊಂದಿಗೆ ಸೇರಿ ಬೆಂಗಳೂರಿನ ಜ್ಯೂವೆಲರಿ ಶಾಪ್‌ನಲ್ಲಿ ಚಿನ್ನಾಭರಣ ಖರೀದಿಸಿ ಸ್ವಂತಕ್ಕೆ ಬಳಸಿಕೊಂಡಿದ್ದ.

**ಜಾಮೀನು ಅರ್ಜಿ ತಿರಸ್ಕಾರ:** ಪ್ರಕರಣಕ್ಕೆ ಸಂಬಂಧಿಸಿದಂತೆ ಡಿ. ಸುರೇಶ (ಪಿಐ, ಕೊಪ್ಪಳ ನಗರ ಠಾಣೆ) ತನಿಖೆ ಕೈಗೊಂಡಿದ್ದರು. ಆರೋಪಿಗಳಾದ ಅನಿಲ್ ಕುಮಾರ ಹಾಗೂ ರಮಾ ಸಲ್ಲಿಸಿದ್ದ ಜಾಮೀನು ಅರ್ಜಿಗೆ ಅಭಿಯೋಗ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕ ವೆಂಕಟೇಶ್ ವಿ.ಎ. ತಕರಾರು ಸಲ್ಲಿಸಿ ವಾದ ಮಂಡಿಸಿದ್ದರು. ಪ್ರಾಧಿಕಾರದ ಹಣ ದುರುಪಯೋಗದಲ್ಲಿ ಆರೋಪಿಗಳ ಪಾತ್ರ ಮೇಲ್ನೋಟಕ್ಕೆ ಕಂಡುಬಂದ ಹಿನ್ನೆಲೆಯಲ್ಲಿ, ಅರ್ಜಿಯನ್ನು ಕುಲಂಕುಷವಾಗಿ ಪರಿಶೀಲಿಸಿದ ಪ್ರಧಾನ ಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರಾದ ತ್ರಿವೇಣಿ ಈರಗಾರ ಅವರು ಇಬ್ಬರೂ ಆರೋಪಿಗಳ ಜಾಮೀನು ಅರ್ಜಿಯನ್ನು ಸೆ. 7, 2026 ರಂದು ವಜಾಗೊಳಿಸಿದ್ದಾರೆ.

# ವಿಶೇಷ ತರಬೇತಿ ಕಾರ್ಯಾಗಾರ ಆಯೋಜಿಸಲು ತೋಟಗಾರಿಕೆ ಜಂಟಿ ನಿರ್ದೇಶಕರಿಗೆ ಮನವಿ

**ಸತ್ಯಮಿಥ್ಯ ಸುದ್ದಿಮೂಲ ಕುಷ್ಟಗಿ:**
ಪರಿಶಿಷ್ಟ ಜಾತಿಗೆ ಸೇರಿದ ಕೊರಮ ಮತ್ತು ಕೊರಚ ಸಮುದಾಯದ ತೋಟ ಗುತ್ತಿಗೆದಾರ ಕುಟುಂಬಗಳಿಗೆ ವೈಜ್ಞಾನಿಕ ತೋಟಗಾರಿಕೆ ತರಬೇತಿ ಹಾಗೂ ಮಾರ್ಗದರ್ಶನ ನೀಡುವಂತೆ ಒತ್ತಾಯಿಸಿ 'ಅಖಿಲ ಕರ್ನಾಟಕ ಕುಳುವ ಮಹಾಸಂಘ (ರಿ) ತಾಲೂಕು ಘಟಕ ಕುಷ್ಟಗಿ' ವತಿಯಿಂದ ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರಿಗೆ ಮನವಿ ಸಲ್ಲಿಸಲಾಯಿತು.

ಕುಷ್ಟಗಿ ತಾಲೂಕಿನಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಕೊರಮ ಮತ್ತು ಕೊರಚ ಸಮುದಾಯದ ಹಲವಾರು ಕುಟುಂಬಗಳು ವರ್ಷಗಳಿಂದ ಕಷ್ಟಪಟ್ಟು ತೋಟಗಳನ್ನು ಗುತ್ತಿಗೆ ಪಡೆದು, ಸಂತೆ ಹಾಗೂ ಇತರ ಮೂಲಗಳ ಮೂಲಕ ಹಣ್ಣು ಮತ್ತು ಕಾಯಿಗಳನ್ನು ಮಾರಾಟ ಮಾಡಿ ಜೀವನ ನಡೆಸುತ್ತಿದ್ದಾರೆ.



ಆದರೆ, ಈ ಕುಟುಂಬಗಳಿಗೆ ತೋಟಗಳ ವೈಜ್ಞಾನಿಕ ನಿರ್ವಹಣೆ, ಉತ್ತಮ ಗುಣಮಟ್ಟದ ಹಣ್ಣುಗಳ ಉತ್ಪಾದನೆ, ಕೀಟ ಮತ್ತು ರೋಗಗಳ ನಿಯಂತ್ರಣ, ಕೊಯ್ಲು ಹಾಗೂ ಕೊಯ್ಲೋತ್ತರ ನಿರ್ವಹಣೆ, ಹಣ್ಣುಗಳ ಸಂಗ್ರಹಣೆ ಮತ್ತು ಸರಿಯಾದ ಸಂಸ್ಕರಣೆಯ ಕುರಿತು ಸೂಕ್ತ ತಾಂತ್ರಿಕ ಜ್ಞಾನದ ಕೊರತೆ ಇದೆ. ಇದರಿಂದಾಗಿ ಅವರ ಆದಾಯದಲ್ಲಿ ನಿರೀಕ್ಷಿತ ಪ್ರಗತಿ ಕಂಡುಬರುತ್ತಿಲ್ಲ.

ಆದ್ದರಿಂದ,ತೋಟಗಾರಿಕೆಇಲಾಖೆಯ ವತಿಯಿಂದ ಈ ಭಾಗದ ಕೊರಮ ಮತ್ತು ಕೊರಚ ಸಮುದಾಯದ ತೋಟ ಗುತ್ತಿಗೆದಾರ ಕುಟುಂಬಗಳಿಗೆ ಅನುಕೂಲವಾಗುವಂತೆ ಒಂದು ದಿನದ ವಿಶೇಷ ತಾಂತ್ರಿಕ ತರಬೇತಿ ಕಾರ್ಯಾಗಾರವನ್ನು ಇಲಾಖೆಯ ತಜ್ಞ ಅಧಿಕಾರಿಗಳ ಮೂಲಕ ಆಯೋಜಿಸಿ, ಸೂಕ್ತ ಮಾರ್ಗದರ್ಶನ ಹಾಗೂ ಪ್ರೋತ್ಸಾಹ ನೀಡಬೇಕು ಎಂದು ಕುಷ್ಟಗಿ ತಾಲ್ಲೂಕಿನ ಪ್ರಗತಿ ಪರ ರೈತರಾದ ಡಾ. ದೇವೇಂದ್ರಪ್ಪ ಬಳೂಟಗಿ ರಾಜ್ಯ ಕಾರ್ಯಕಾರಿ ಸದಸ್ಯರಾದ ರಮೇಶ್‌ಕುಮಾರ ಭಜಂತ್ರಿ ಹಾಗೂ ಅಧ್ಯಕ್ಷರಾದ ಮಂಜುನಾಥ ಭಜಂತ್ರಿ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಜಂಟಿ ನಿರ್ದೇಶಕರು ತೋಟಗಾರಿಕೆ ಇಲಾಖೆಯ ಕೊಪ್ಪಳ ಇವರಿಗೆ ಮನವಿ ಪತ್ರದ ಮೂಲಕ ಕೋರಿದ್ದಾರೆ.

# ರಥ ಶಿಲ್ಪಿ ಆನಂದ ಬಡಿಗೇರ ಅವರ ಅದ್ಭುತ ಕೆತ್ತನೆ ಕಲೆಗೆ ಸುಕನ್ಯಾ ವೃದ್ಧಾಶ್ರಮದಿಂದ ಗೌರವ

**ಸತ್ಯಮಿಥ್ಯ ಸುದ್ದಿಮೂಲ ಗದಗ:**
ರೋಣ ತಾಲೂಕಿನ ಹೊಸಳ್ಳಿ ಗ್ರಾಮದ ಪ್ರತಿಭಾವಂತ ರಥ ಶಿಲ್ಪಿ ಹಾಗೂ ಕಲಾವಿದ ಆನಂದ ಬಡಿಗೇರ ಅವರು ತಮ್ಮ ಅಪೂರ್ವ ಕಟ್ಟಿಗೆಯ ಕೈಕೆತ್ತನೆ ಕಲೆಯ ಮೂಲಕ ಗಮನ ಸೆಳೆಯುತ್ತಿದ್ದಾರೆ. ಒಂದೇ ವರ್ಷದಲ್ಲಿ ಏಳು ಗ್ರಾಮಗಳಿಗೆ ಅಗತ್ಯವಿರುವ ನೂತನ ರಥಗಳನ್ನು ತಮ್ಮ ಕೈಚಳಕದಿಂದ ನಿರ್ಮಿಸಿ, ಗ್ರಾಮಸ್ಥರ ಮೆಚ್ಚುಗೆ ಹಾಗೂ ಗೌರವಕ್ಕೆ ಪಾತ್ರರಾಗಿದ್ದಾರೆ.

ಕಟ್ಟಿಗೆಯಲ್ಲಿ ಸೂಕ್ಷ್ಮವಾದ ಕೆತ್ತನೆ, ಕಲಾತ್ಮಕ ವಿನ್ಯಾಸ ಹಾಗೂ ಪಾರಂಪರಿಕ ಶೈಲಿಯನ್ನು ಅಳವಡಿಸಿಕೊಂಡು ರಥಗಳನ್ನು ನಿರ್ಮಿಸುವಲ್ಲಿ ಆನಂದ ಬಡಿಗೇರ ಅವರು ವಿಶೇಷ ಪರಿಣತಿ ಹೊಂದಿದ್ದಾರೆ. ಭಕ್ತಿಯೊಂದಿಗೆ ಕಲೆಯನ್ನು ಸಮನ್ವಯಗೊಳಿಸಿ ನಿರ್ಮಿಸಿರುವ ಅವರ ರಥಗಳು ವಿವಿಧ ಗ್ರಾಮಗಳ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮೆರುಗು ತಂದಿವೆ.

ಆನಂದ ಬಡಿಗೇರ ಅವರ ವಿಶಿಷ್ಟ ಪ್ರತಿಭೆಯನ್ನು ಗುರುತಿಸಿರುವ ಗ್ರಾಮಸ್ಥರು ಹಲವೆಡೆ ಅವರನ್ನು ಸನ್ಮಾನಿಸಿ ಗೌರವಿಸಿದ್ದಾರೆ. ಇದೀಗ ಅಥಣಿ ತಾಲೂಕಿನ ಭರಮಚೋಡಿ ಗ್ರಾಮದ ಚಮಕೇರಿ ರಸ್ತೆಯಲ್ಲಿರುವ ಸುಕನ್ಯಾ ವೃದ್ಧಾಶ್ರಮದ ವತಿಯಿಂದಲೂ ಅವರ ಕಲಾ ಪ್ರತಿಭೆಗೆ ಗೌರವದ ಗರಿ ದೊರೆತಿದೆ.




ಸುಕನ್ಯಾ ವೃದ್ಧಾಶ್ರಮದ ಆವರಣದಲ್ಲಿ ನಡೆಯಲಿರುವ 'ವಾಸಲ್ ಪೂಜಾ' (ಮುಖ್ಯ ದ್ವಾರ ಪ್ರತಿಷ್ಠಾಪನಾ) ಮಹೋತ್ಸವದಲ್ಲಿ ಪೂಜ್ಯ ಗುರುತ್ರಯರ ದಿವ್ಯ ಸನ್ನಿಧಿ ಹಾಗೂ ಅಮೃತ ಹಸ್ತದಿಂದ ಕಾರ್ಯಕ್ರಮ ನೆರವೇರಲಿದ್ದು, ಇದೇ ಸಂದರ್ಭದಲ್ಲಿ ರಥ ಶಿಲ್ಪಿ ಆನಂದ ಬಡಿಗೇರ ಅವರ ಅದ್ಭುತ ಕಟ್ಟಿಗೆಯ ಕೈಕೆತ್ತನೆ ಕಲೆಯನ್ನು ಗೌರವಿಸಲಾಗುತ್ತಿದೆ. ಚಿತ್ರನಟ ಹಾಗೂ ನಿರ್ದೇಶಕ ಶ್ರೀ ರಾಧಾಕೃಷ್ಣ ಪಲ್ಲಕ್ಕಿ ಸೇರಿದಂತೆ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಗ್ರಾಮೀಣ ಭಾಗದಲ್ಲಿ ಅಪರೂಪದ ಹಾಗೂ ಪಾರಂಪರಿಕ ರಥ ಶಿಲ್ಪಕಲೆಯನ್ನು ಉಳಿಸಿ ಬೆಳೆಸುತ್ತಿರುವ ಆನಂದ ಬಡಿಗೇರ ಅವರಂತಹ ಕಲಾವಿದರಿಗೆ ಸರ್ಕಾರ, ವಿವಿಧ ಸಂಘ–ಸಂಸ್ಥೆಗಳು ಹಾಗೂ ಕಲಾಭಿಮಾನಿಗಳು ಹೆಚ್ಚಿನ ಪ್ರೋತ್ಸಾಹ ನೀಡಬೇಕಿದೆ. ಅವರ ಪ್ರತಿಭೆಯನ್ನು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಗುರುತಿಸಿ ಸೂಕ್ತ ಪ್ರಶಸ್ತಿ–ಪುರಸ್ಕಾರಗಳಿಗೆ ಪರಿಗಣಿಸುವ ಮೂಲಕ ಕಲಾವಿದನ ಕಲಾ ಸಾಧನೆಗೆ ಮತ್ತಷ್ಟು ಉತ್ತೇಜನ ನೀಡಬೇಕು ಎಂಬುದು ಕಲಾಭಿಮಾನಿಗಳ ಆಶಯವಾಗಿದೆ. ಕೇವಲ ಒಂದು ವರ್ಷದಲ್ಲಿ ಏಳು ಗ್ರಾಮಗಳಿಗೆ ನೂತನ ರಥಗಳನ್ನು ನಿರ್ಮಿಸಿರುವ ಆನಂದ ಬಡಿಗೇರ್ ಅವರ ಸಾಧನೆ ಗಮನಾರ್ಹವಾಗಿದೆ. ಪಾರಂಪರಿಕ ರಥ ನಿರ್ಮಾಣದ ಕಲೆಯನ್ನು ಆಧುನಿಕ ಕಲಾತ್ಮಕತೆ ಹಾಗೂ ಸೂಕ್ಷ್ಮ ಕೈಕೆತ್ತನೆಯೊಂದಿಗೆ ಮುಂದುವರಿಸುತ್ತಿರುವ ಅವರು, ಗ್ರಾಮೀಣ ಕಲಾ ಪರಂಪರೆಯ ಸಂರಕ್ಷಣೆಯಲ್ಲಿ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ.

ಸತ್ಯ ಮಿಥ್ಯ
ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

SATY MITHI
Kannada Daily Morning

## ಶೆಟ್ಟೆಪ್ಪ ಬಂಡಿವಡ್ಡರಗೆ ಜಿಲ್ಲಾ ಮಟ್ಟದ 'ಗುರುಕುಲ ಗುರುರತ್ನ' ಪ್ರಶಸ್ತಿ

**ಸತ್ಯಮಿಥ್ಯ ಸುದ್ದಿಮೂಲ ಹೊಳೆಆಲೂರು:**
ಇಲ್ಲಿನ ಇಂದಿರಾ ಗಾಂಧಿ ವಸತಿ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಶೆಟ್ಟೆಪ್ಪ ಬಂಡಿವಡ್ಡರ ಅವರಿಗೆ ಜಿಲ್ಲಾ ಮಟ್ಟದ 'ಗುರುಕುಲ ಗುರುರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಗದಗ ನಗರದ ಹಾತಲಗೇರಿ ನಾಕಾಬಳಿ ಇರುವ ಜಿ.ಟಿ. ಕಾಲೇಜಿನ ಆವರಣದಲ್ಲಿರುವ ಸಭಾಭವನದಲ್ಲಿ ಸಮಾಜ ಕಲ್ಯಾಣ ಇಲಾಖೆ,ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆಗಳ ನೌಕರರ ಸಂಘದ (ಕ್ರೈಸ್) ಸಂಯುಕ್ತ ಆಶ್ರಯದಲ್ಲಿ ಗುರುವಾರ ಆಯೋಜಿಸಲಾಗಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಸತಿ ಶಾಲೆಯ ಮಕ್ಕಳ ಶೈಕ್ಷಣಿಕ, ಕ್ರೀಡೆ, ಕಲೆ ಹಾಗೂ ಸಾಂಸ್ಕೃತಿಕ ರಂಗದ ಸರ್ವಾಂಗೀಣ ಅಭಿವೃದ್ಧಿಗೆ ಹಗಲಿರುಳು ಶ್ರಮಿಸುತ್ತಾ, ವಿದ್ಯಾರ್ಥಿಗಳನ್ನು ವಾತ್ಸಲ್ಯದಿಂದ ಮುನ್ನಡೆಸುತ್ತಿರುವ ಶೆಟ್ಟೆಪ್ಪ ಅವರ ಶ್ಲಾಘನೀಯ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ರಾಜ್ಯ ವಿಧಾನ ಪರಿಷತ್ತಿನ ಮಾಜಿ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸದಸ್ಯ ಎಸ್. ವಿ. ಸಂಕನೂರ, ರೋಣ ತಾಲ್ಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಮಿಥುನ್ ಜಿ. ಪಾಟೀಲ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಡಾ. ನಂದಾ ಹಣಬರಟ್ಟಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಮಹಬೂಬ ಎಂ. ತುಂಬರಮಟ್ಟಿ ಹಾಗೂ ವಸತಿ ಶಾಲೆಗಳ ನೌಕರರ ಸಂಘದ ಜಿಲ್ಲಾಧ್ಯಕ್ಷ ಮುತ್ತಪ್ಪ ಎಫ್. ಕೆಳಗಿನಮನಿ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.



## ರೈತರ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನರಗುಂದ ಬಂದ್

**ಸತ್ಯಮಿಥ್ಯ ಸುದ್ದಿಮೂಲ ನರಗುಂದ:**
ಉತ್ತರ ಕರ್ನಾಟಕದ ಸಂಕಷ್ಟದಲ್ಲಿರುವ ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ನರಗುಂದ ತಾಲೂಕು ಬಂದ್‌ಗೆ ಶನಿವಾರ ಕರೆ ನೀಡಲಾಗಿದ್ದು, ಪ್ರತಿಭಟನೆಯ ಕಾವು ಜೋರಾಗಿತ್ತು .

ನರಗುಂದದ ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ನೂರಾರು ರೈತರು ಹಾಗೂ ಸಂಘಟನೆಯ ಕಾರ್ಯಕರ್ತರು ಒಗ್ಗೂಡಿ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ದಶಕಗಳಿಂದ ನನೆಗುದಿಗೆ ಬಿದ್ದಿರುವ ಕಳಸಾ–ಬಂಡೂರಿ ಹಾಗೂ ಮಹದಾಯಿ ಯೋಜನೆಗಳನ್ನು ಶೀಘ್ರ ಜಾರಿಗೊಳಿಸಿ, ಮಲಪ್ರಭಾ ನದಿಗೆ ನೀರು ಹರಿಸಬೇಕು ಎಂಬುದು ಪ್ರತಿಭಟನಾಕಾರರ ಮುಖ್ಯ ಹಕ್ಕು ಒತ್ತಾಯವಾಗಿದೆ. ಇದರ ಜೊತೆಗೆ ಕೃಷಿ ಬೆಳೆ ಹಾನಿಗೆ ಸೂಕ್ತ ಪರಿಹಾರ, ರೈತರ ಸಾಲ ಮನ್ನಾ ಹಾಗೂ ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಬೆಂಬಲ ಬೆಲೆ ನಿಗದಿಪಡಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯ ಹಿನ್ನೆಲೆಯಲ್ಲಿ ನರಗುಂದ ಪಟ್ಟಣದಲ್ಲಿ ಬೆಳಿಗ್ಗೆಯಿಂದಲೇ ಅಂಗಡಿ ಮುಂಗಟ್ಟುಗಳು ಹಾಗೂ ವಾಣಿಜ್ಯ ವಹಿವಾಟುಗಳು ಸಂಪೂರ್ಣವಾಗಿ ಬಾಗಿಲು ಮುಚ್ಚಿದ್ದವು. ಸಾರಿಗೆ ಸಂಸ್ಥೆಯ ಬಸ್ ಸಂಚಾರ ಹಾಗೂ ಖಾಸಗಿ ವಾಹನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಿದ್ದರಿಂದ ಪ್ರಯಾಣಿಕರು ಹಾಗೂ ಸ್ಥಳೀಯ ಸಾರ್ವಜನಿಕರು ತೀವ್ರ ಪರದಾಡುವಂತಾಯಿತು.

ಸ್ಥಳಕ್ಕೆ ಭೇಟಿ ನೀಡಿದ ತಹಸೀಲ್ದಾರ್ ಹಾಗೂ ಪೊಲೀಸ್ ಅಧಿಕಾರಿಗಳಿಗೆ ರೈತ ನಾಯಕರು ಮನವಿ ಪತ್ರ ಸಲ್ಲಿಸಿ, ಸರ್ಕಾರ ತಕ್ಷಣವೇ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ಉಗ್ರಗೊಳಿಸುವುದಾಗಿ ಎಚ್ಚರಿಸಿದರು.ಮುನ್ನೆಚ್ಚರಿಕಾಕ್ರಮವಾಗಿ ಪಟ್ಟಣದಾದ್ಯಂತ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.



## ಪಾಲಕರು ಮಕ್ಕಳ ಕಲಿಕಾ ಪ್ರಗತಿಯತ್ತ ಗಮನಹರಿಸಬೇಕು: ಕೆ.ಪಿ. ಸಾಲಿಮಠ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ:**
ಮಗುವಿನ ಕೈ ಹಿಡಿದು ಶಾಲೆಯ ಮೆಟ್ಟಿಲೇರಿಸುವುದು ಮಾತ್ರ ಪಾಲಕರ ಜವಾಬ್ದಾರಿಯಲ್ಲ, ಆ ಮಗುವಿನ ಕನಸುಗಳಿಗೆ ದಾರಿ ತೋರಿಸುವುದು, ಅದರ ನಡವಳಿಕೆ ಮತ್ತು ಅಭ್ಯಾಸವನ್ನು ಗಮನಿಸುವುದು ಹಾಗೂ ಕಲಿಕೆಯ ಹಾದಿಯಲ್ಲಿ ಶಿಕ್ಷಕರೊಂದಿಗೆ ಹೆಜ್ಜೆ ಹಾಕುವುದು ಕೂಡ ಪಾಲಕರ ಕರ್ತವ್ಯವಾಗಿದೆ ಎಂದು ಡಯಟ್‌ನ ನಿವೃತ್ತ ಉಪನ್ಯಾಸಕ ಕೆ.ಪಿ. ಸಾಲಿಮಠ ಹೇಳಿದರು.

ಪಟ್ಟಣದ ಶ್ರೀ ಕೃಷ್ಣಾಜಿ ರಂಗರಾವ್ ಕುಲಕರ್ಣಿ ಸರ್ಕಾರಿ ಪ್ರೌಢಶಾಲೆಯಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಪಾಲಕರ ಸಭೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಮಕ್ಕಳ ಕಲಿಕಾ ಪ್ರಗತಿ ಕೇವಲ ಶಾಲೆಯ ನಾಲ್ಕು ಗೋಡೆಗಳೊಳಗೆ ನಿರ್ಧಾರವಾಗುವುದಿಲ್ಲ. ಮನೆಯಲ್ಲಿ ಪಾಲಕರು ನೀಡುವ ಸಮಯ, ಪ್ರೋತ್ಸಾಹ ಮತ್ತು ಕಲಿಕೆಗೆ ಕಲ್ಪಿಸುವ ವಾತಾವರಣವೂ ಅಷ್ಟೇ ಮುಖ್ಯ. ಆದ್ದರಿಂದ ಪಾಲಕರು ತಮ್ಮ ಕೆಲಸ ಕಾರ್ಯಗಳ ನಡುವೆಯೂ ಮಕ್ಕಳಿಗಾಗಿ ಸಮಯ ಮೀಸಲಿಟ್ಟು, ಶಿಕ್ಷಕರೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು. ಮಕ್ಕಳ ಗೃಹಪಾಠ, ಗೈರುಹಾಜರಿ, ನಡವಳಿಕೆ ಹಾಗೂ ಕಲಿಕೆಯಲ್ಲಿನ ಏರುಪೇರುಗಳನ್ನು ಗಮನಿಸಿ, ಸಮಸ್ಯೆ ಕಂಡುಬಂದಾಗ ಶಿಕ್ಷಕರೊಂದಿಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕು ಎಂದು ಸಲಹೆ ನೀಡಿದರು.

ಸರ್ಕಾರ, ಸಾರ್ವಜನಿಕರು ಹಾಗೂ ಸಂಘ–ಸಂಸ್ಥೆಗಳು ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ನೆರವು ನೀಡುತ್ತಿರುವುದು ಶಿಕ್ಷಣದ ಮೇಲಿನ ಸಮಾಜದ ಕಾಳಜಿಯನ್ನು ತೋರಿಸುತ್ತದೆ. ಶ್ರಾವಣ ಮಾಸದಲ್ಲಿ ದಾನಿಗಳ ಸಹಕಾರದಿಂದ ಒಂದು ತಿಂಗಳ ಕಾಲ ನಡೆದ 'ಅಮೃತ ಭೋಜನ' ಕಾರ್ಯಕ್ರಮವೂ ಇದಕ್ಕೆ ಸಾಕ್ಷಿಯಾಗಿದೆ. ಸಮಾಜ ನೀಡುತ್ತಿರುವ ಸೌಲಭ್ಯ ಮತ್ತು ಸಹಕಾರವನ್ನು ಮಕ್ಕಳು ಸದುಪಯೋಗಪಡಿಸಿಕೊಂಡು ಉತ್ತಮ ಭವಿಷ್ಯ ಕಟ್ಟಿಕೊಳ್ಳಬೇಕು ಎಂದರು.



ಮುಖ್ಯ ಶಿಕ್ಷಕ ಎಸ್.ಬಿ. ನಿಡಗುಂದಿ ಮಾತನಾಡಿ, ಕಳೆದ ಶೈಕ್ಷಣಿಕ ವರ್ಷದಲ್ಲಿ ನಿಡಗುಂದಿ, ನರೇಗಲ್ಲ ಹಾಗೂ ಅಬ್ಬಿಗೇರಿ ಕ್ಲಸ್ಟರ್‌ನ 15 ಶಾಲೆಗಳ ಪೈಕಿ ತಮ್ಮ ಶಾಲೆ ಶೇ.100ರಷ್ಟು ಎಸ್‌ಎಸ್‌ಎಲ್‌ಸಿ ಫಲಿತಾಂಶ ದಾಖಲಿಸಿದ ಏಕೈಕ ಶಾಲೆಯಾಗಿರುವುದು ಹೆಮ್ಮೆಯ ಸಂಗತಿಯಾಗಿದೆ. ಕಳೆದ ವರ್ಷದ ಸಾಧನೆಯನ್ನು ಮುಂದುವರಿಸಿಕೊಂಡು ಈ ಶೈಕ್ಷಣಿಕ ವರ್ಷದಲ್ಲಿಯೂ ಶೇ.100ರಷ್ಟು ಫಲಿತಾಂಶ ಸಾಧಿಸುವ ಗುರಿ ಹೊಂದಲಾಗಿದೆ. ವಿದ್ಯಾರ್ಥಿಗಳು ಶ್ರದ್ಧೆ, ಶಿಸ್ತು ಮತ್ತು ನಿರಂತರ ಪರಿಶ್ರಮದಿಂದ ಅಭ್ಯಾಸ ಮಾಡಿ ಶಾಲೆಗೆ ಹಾಗೂ ತಮ್ಮ ಪಾಲಕರಿಗೆ ಕೀರ್ತಿ ತರಬೇಕು ಎಂದು ಕಿವಿಮಾತು ಹೇಳಿದರು.

ಸಭೆಯ ವಿಶೇಷ ಆಕರ್ಷಣೆಯಾಗಿದ್ದ ಕೆ.ಪಿ. ಸಾಲಿಮಠ ಅವರ ಪಾಲಕರು, ವಿದ್ಯಾರ್ಥಿಗಳು ಹಾಗೂ ಶಿಕ್ಷಕರೊಂದಿಗಿನ ಸಂವಾದದಲ್ಲಿ ಮಕ್ಕಳ ಪ್ರಗತಿ ಮತ್ತು ಸಮಸ್ಯೆಗಳ ಕುರಿತು ಮುಕ್ತವಾಗಿ ಚರ್ಚಿಸಲಾಯಿತು. ಮಕ್ಕಳ ನಡವಳಿಕೆ, ಗೃಹಪಾಠ, ಗೈರುಹಾಜರಿ ಸೇರಿದಂತೆ ಕಲಿಕೆಗೆ ಸಂಬಂಧಿಸಿದ ಹಲವು ವಿಷಯಗಳು ಚರ್ಚೆಗೆ ಬಂದವು. ಮಕ್ಕಳ ಸಮಸ್ಯೆಗಳನ್ನು ಕೇವಲ ದೂರುಗಳಾಗಿ ನೋಡದೆ, ಅವುಗಳ ಹಿಂದಿರುವ ಕಾರಣಗಳನ್ನು ಅರ್ಥಮಾಡಿಕೊಂಡು ಪರಿಹರಿಸುವ ಅಗತ್ಯದ ಕುರಿತು ಸಭೆಯಲ್ಲಿ ಅರಿವು ಮೂಡಿಸಲಾಯಿತು.

ಕಾರ್ಯಕ್ರಮದ ಆರಂಭದಲ್ಲಿ ತರಗತಿ ಶಿಕ್ಷಕಿ ಎಸ್.ಎಂ. ಹಳ್ಳದ ಪಾಲಕರ ಸಭೆಯ ಉದ್ದೇಶ ಕುರಿತು ಮಾತನಾಡಿದರು. ಪಾಲಕರ ಪ್ರತಿನಿಧಿಗಳಾದ ಮಹಾಂತೇಶ ಜಕ್ಕಲಿ ಹಾಗೂ ರೇಣುಕಾ ರೊಳ್ಳಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶಿಕ್ಷಕರ ಪರವಾಗಿ ಎಂ.ವಿ. ಜಾದವ್ ಮಾತನಾಡಿದರು. ಶಿಕ್ಷಕ ಡಿ.ಎಸ್. ಬಡಿಗೇರ್ ವಿದ್ಯಾರ್ಥಿ□ಪಾಲಕರ ಸಂವಾದದಲ್ಲಿ ಭಾಗವಹಿಸಿ ಕಾರ್ಯಕ್ರಮ ನಿರೂಪಿಸಿದರು.

ಶಿಕ್ಷಕ ಬಿ.ಟಿ. ತಾಳಿ ಸ್ವಾಗತಿಸಿದರು. ಶಿಕ್ಷಕಿ ಕೌಸಲ್ಯ ಕುರಿ ವಂದಿಸಿದರು. ಸಭೆಯಲ್ಲಿ 50ಕ್ಕೂ ಹೆಚ್ಚು ಪಾಲಕರು ಭಾಗವಹಿಸಿ ಮಕ್ಕಳ ಶೈಕ್ಷಣಿಕ ಪ್ರಗತಿ ಕುರಿತು ಮಾಹಿತಿ ಪಡೆದುಕೊಂಡರು. ಸಭೆಯ ಬಳಿಕ ಶ್ರಾವಣ ಮಾಸದ 'ಅಮೃತ ಭೋಜನ' ಸವಿದು ಕಾರ್ಯಕ್ರಮದ ಸದುಪಯೋಗ ಪಡೆದುಕೊಂಡರು. ಮಕ್ಕಳ ಭವಿಷ್ಯಕ್ಕಾಗಿ ಶಾಲೆ□ಮನೆ ಎರಡೂ ಕೈಗಳು ಒಂದಾದಾಗಲೇ ಶಿಕ್ಷಣದ ನಿಜವಾದ ಫಲ ಸಿಗುತ್ತದೆ ಎಂಬ ಸಂದೇಶವನ್ನು ಪಾಲಕರ ಸಭೆ ಸಾರಿತು.

## ಪ್ರಜಾಪ್ರಭುತ್ವ ದಿನಾಚರಣೆ 15ರಂದು



**ರೋಣ;** ಸಮಾಜ ಕಲ್ಯಾಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಾನೂನು ನ್ಯಾಯ, ಮಾನವ ಹಕ್ಕುಗಳ ಇಲಾಖೆ ಹಾಗೂ ತಾಲೂಕು ಆಡಳಿತದ ವತಿಯಿಂದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯನ್ನು ಸೆ. 15ರಂದು ಬೆಳಗ್ಗೆ 10.30ಕ್ಕೆ ಪಟ್ಟಣದ ಗುರು ಭವನದಲ್ಲಿ ಆಯೋಜಿಸಲಾಗಿದೆ. ವಿಧಾನಸಭೆ ಅಧ್ಯಕ್ಷ ಜಿ.ಎಸ್. ಪಾಟೀಲ ಅಧ್ಯಕ್ಷತೆ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

## ಗಣಪ ವಿಸರ್ಜನೆ, ಸಾರ್ವಜನಿಕ ಗಮನಕ್ಕೆ

ಗದಗ: ನಗರದಲ್ಲಿ ಪರಿಸರ ಸ್ನೇಹಿ ಗಣೇಶ ಹಬ್ಬವನ್ನು ಆಚರಿಸುವ ಸಂಧರ್ಭದಲ್ಲಿ ಗಣೇಶ ಮೂರ್ತಿಗಳನ್ನು ವಿಸರ್ಜಿಸುವ ಬಗ್ಗೆ ಸಾರ್ವಜನಿಕರು ಈ ಕೆಳಗಿನಂತೆ ಜಾಗೃತ ವಹಿಸಬೇಕು.

ವಿಷಕಾರಿ ರಾಸಾಯನಿಕ, ಲೋಹದಲೇಪದ, ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ಗಣೇಶನ ಮೂರ್ತಿ ಬಳಕೆ ಮಾಡಬೇಡಿ. ಸಾದಾ ಜೇಡಿ ಮಣ್ಣಿನ ಮುದ್ದಾದ ಪುಟ್ಟ ಗಣೇಶ ವಿಗ್ರಹವನ್ನು ಸ್ಥಾಪಿಸಿ. ಎಲೆ, ಹೂವುಗಳಿಂದ ಮಾಡಿದ ನೈಸರ್ಗಿಕ ಬಣ್ಣ ಹಚ್ಚಿದ ಗಣಪನನ್ನೇ ಪೂಜಿಸಿ. ಎಲ್ಲೂ ಪ್ಲಾಸ್ಟಿಕ್ ವಸ್ತುಗಳ ಬಳಕೆ ಮಾಡಬೇಡಿ. ಸಾಮೂಹಿಕವಾಗಿ ನಡೆಸುವ ಗಣೇಶನ ಚಪ್ಪರಕ್ಕೆ ಪರಿಸರ ಸ್ನೇಹಿ ವಸ್ತುಗಳನ್ನೇ ಬಳಸಿ. ಭಾವಿ, ಕೆರೆಗಳಲ್ಲಿ ಗಣಪತಿ ವಿಸರ್ಜನೆ ಮಾಡಬೇಡಿ. ಹಾಗೆ ಮಾಡಿದರೆ ಅಂತರ್ಜಲ, ಕುಡಿಯುವ ನೀರಿನ ಸೆಲೆ–ಎಲ್ಲವೂ ಬತ್ತಿಹೋಗುತ್ತವೆ. ಬದಲಿಗೆ ಬಕೆಟ್‌ನಲ್ಲಿ, ಸಂಚಾರಿ ವಿಸರ್ಜನಾ ವಾಹನದಲ್ಲಿ ವಿಸರ್ಜಿಸಿ, ಸೂಚಿತ ಕೆರೆಗಳಲ್ಲಿ ವಿಸರ್ಜಿಸುವ ಮುನ್ನ ಹೂವು, ವಸ್ತ್ರ, ಪ್ಲಾಸ್ಟಿಕ್ ಹಾರ ಎಲ್ಲವನ್ನೂ ತೆಗೆಯಿರಿ. ಗಣಪತಿ ಹಬ್ಬದ ಸಂದರ್ಭದಲ್ಲಿ ಪಟಾಕಿ ಸಿಡಿಸಬೇಡಿ. ಪಟಾಕಿಯ ಹೊಗೆ ವಿಷಪೂರಿತ; ಅಲ್ಲದೆ ರಸ್ತೆ ತುಂಬಾ ಕಸವಾಗುತ್ತದೆ; ಶಬ್ದವೂ ಕಿವಿಗೆ ಹಾನಿಕರ. ಗಣೇಶ ಹಬ್ಬದಲ್ಲಿ ರಸ್ತೆ, ಚರಂಡಿಯಲ್ಲಿ ಹೂವಿನ ಹಾರ, ತಟ್ಟೆ ಲೋಟ, ಎಲೆ ಎಸೆಯಬೇಡಿ. ಕಸದ ವಾಹನ ಬಳಸಿ. ಗಣೇಶ ಮೂರ್ತಿಗಳನ್ನು ಪುರಸಭೆಯವರು ನಿಗದಿಪಡಿಸಿದ ಸ್ಥಳಗಳಲ್ಲಿ ಮಾತ್ರ ವಿಸರ್ಜಿಸಬೇಕು ಎಂದು ನರಗುಂದ ಪುರಸಭೆ ಆಡಳಿತಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರಜಾಸೇವೆ ಆಂದೋಲನಕ್ಕೆ ಎಲ್ಲೆಡೆ ಮೆಚ್ಚುಗೆ

### ಕೊತಬಾಳ ಗ್ರಾಮ ಪಂಚಾಯಿತಿಯಲ್ಲಿ ಆಯೋಜನೆ | ತಹಸೀಲ್ದಾರ್ ನಾಗರಾಜ ಕೆ. ಹೇಳಿಕೆ

**ರೋಣ:** ಪ್ರಜೆಗಳ ಸಮಸ್ಯೆ ಬಗೆಹರಿಸಲು ಸರ್ಕಾರ ರೂಪಿಸಿರುವ ಪ್ರಜಾಸೇವೆ ಆಂದೋಲನಕ್ಕೆ ಎಲ್ಲೆಡೆ ಮೆಚ್ಚುಗೆ ವ್ಯಕ್ತವಾಗುತ್ತಿದೆ ಎಂದು ತಹಸೀಲ್ದಾರ್ ನಾಗರಾಜ ಕೆ. ಹೇಳಿದರು.

ಕೊತಬಾಳ ಗ್ರಾಮ ಪಂಚಾಯಿತಿ ವತಿಯಿಂದ ಗ್ರಾಮದ ಶ್ರೀ ಗುರು ಅಡವಿಸಿದ್ಧೇಶ್ವರ ಮಠದ ಆವರಣದಲ್ಲಿ ಹಮ್ಮಿಕೊಂಡಿದ್ದ ಪ್ರಜಾಸೇವೆ ಆಂದೋಲನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರಜಾಸೇವೆ ಆಂದೋಲನ ಯಶಸ್ವಿಯಾಗಲು ಪ್ರಜೆಗಳ ಸಹಕಾರ ಅತ್ಯಗತ್ಯವಾಗಿದೆ. ಕಳೆದ ವಾರ ಆಯೋಜಿಸಿದ್ದ ಪ್ರಜಾಸೇವೆ ಅಭಿಯಾನದ ಅರ್ಜಿ ಸ್ವೀಕಾರದಲ್ಲಿ ಕೋಲಾರ ಜಿಲ್ಲೆ ಪ್ರಥಮ ಸ್ಥಾನದಲ್ಲಿದ್ದರೆ, ಗದಗ ಜಿಲ್ಲೆ ಎರಡನೇ ಸ್ಥಾನ ಪಡೆದಿದೆ ಎಂದರು.

ತಾಪಂ ಇಒ ಚಂದ್ರಶೇಖರ ಕಂದಕೂರ ಮಾತನಾಡಿ, ಜನರ ಬಳಿಗೆ ಸರ್ಕಾರ ತೆರಳಬೇಕು ಎಂಬ ನಿಟ್ಟಿನಲ್ಲಿ ಪ್ರಜಾಸೇವೆ ಆಂದೋಲನ ಹಮ್ಮಿಕೊಳ್ಳಲಾಗಿದೆ. ಪ್ರಜೆಗಳ ಸಮಸ್ಯೆಗೆ ಶೀಘ್ರ ಪರಿಹಾರ ದೊರಕಿಸುವ ಕೆಲಸ ಅಧಿಕಾರಿಗಳು ಮಾಡಬೇಕು. ಪ್ರತಿ ಗ್ರಾಮ ಪಂಚಾಯಿತಿ ಹಾಗೂ ಹೋಬಳಿ ಮಟ್ಟದಲ್ಲಿ ಆಂದೋಲನ ಹಮ್ಮಿಕೊಳ್ಳಲಾಗಿದೆ ಎಂದರು.



ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಸಿದ್ದಣ್ಣ ಯಾಳಗಿ ಮಾತನಾಡಿ, ಜನರ ಸಮಸ್ಯೆಗಳನ್ನು ಜನರ ಬಾಗಿಲಿಗೆ ತೆರಳಿ ಬಗೆಹರಿಸುವ ನಿಟ್ಟಿನಲ್ಲಿ ಸರ್ಕಾರ ಹೊಸ ಯೋಜನೆ ರೂಪಿಸಿದೆ. ಪ್ರತಿಯೊಬ್ಬರೂ ಯೋಜನೆ ಸದುಪಯೋಗ ಮಾಡಿಕೊಳ್ಳಬೇಕು ಎಂದರು.

ತಾಪಂ ಯೋಜನಾ ನಿರ್ದೇಶಕ ಸಿ.ಎಸ್. ನೀಲಗುಂದ, ಆರ್‌ಡಬ್ಲ್ಯುಎಸ್ ಅಧಿಕಾರಿ ರಶ್ಮಿ ನಡುವಿನಮನಿ, ಸಿಡಿಪಿಒ ಲಲಿತಾ ಅಳವಂಡಿ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಗೀತಾ ಆಲೂರ, ಹೆಸ್ಕಾಂ ಎಇಇ ರಾಘವೇಂದ್ರ ಕೋಚಿ, ಎಂಆರ್‌ಬಿಸಿ ಅಧಿಕಾರಿ ಮುತ್ತಣ್ಣ ಮೆಣಸಿನಕಾಯಿ, ಕೃಷಿ ಅಧಿಕಾರಿ ಬಸವರಾಜ ಮಾಳೇದ, ತೋಟಗಾರಿಕೆ ಅಧಿಕಾರಿ ಗಿರೀಶ ಹೊಸೂರ, ಬಿಇಒ ದಯಾನಂದ ಯಾವಗಲ್ಲ, ಅಕ್ಷರ ದಾಸೋಹ ಕಾರ್ಯಕ್ರಮಾಧಿಕಾರಿ ಆರ್.ಎಲ್. ನಾಯ್ಕರ್, ಟಿಎಚ್‌ಒ ಬಿ.ಎಸ್. ಭಜಂತ್ರಿ, ಕೆ.ಎ. ಹಾದಿಮನಿ, ಆಹಾರ ನಿರೀಕ್ಷಕಿ ಸುವರ್ಣಾ ಜುಮ್ಮನಕಟ್ಟಿ ಪಿಡಿಒ ಐ.ಎಫ್. ಬೋದ್ಲೇಖಾನ, ಇತರರು ಇದ್ದರು.

### ಅಧಿಕಾರಿಗಳಿಗೆ ಎಚ್ಚರಿಕೆ ಕೊಟ್ಟ ತಹಸೀಲ್ದಾರ್

**ಬೆಳಗ್ಗೆ 10.30ಕ್ಕೆ ಕಾರ್ಯಕ್ರಮ ಆರಂಭವಾಗಿ ತಾಲೂಕಿನ ಹಿರಿಯ ಅಧಿಕಾರಿಗಳು ಕಾದು ಕುಳಿತಿದ್ದರು. ಆದರೆ, ಕೆಲ ಇಲಾಖೆಯ ಮುಖ್ಯಸ್ಥರು 11 ಗಂಟೆಯಾದರೂ ಪ್ರಜಾಸೇವೆ ಕಾರ್ಯಕ್ರಮಕ್ಕೆ ಆಗಮಿಸಿರಲಿಲ್ಲ. ಇದರಿಂದ ಕೆರಳಿದ ತಹಸೀಲ್ದಾರ್ ನಾಗರಾಜ ಕೆ. ಮುಂದಿನ ಸಭೆಗೆ ನಿಗದಿತ ಸಮಯಕ್ಕೆ ಬರಬೇಕು. ಇಲ್ಲದಿದ್ದರೆ ಅಂತಹ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.**

## ಆಶ್ರಯ ಕಾಲೋನಿಗೆ ಮೂಲ ಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸಿ ಮನವಿ

ರೋಣ: ತಾಲೂಕಿನ ಕೊತಬಾಳ ಗ್ರಾಮದ ಆಶ್ರಯ ಕಾಲನಿಗೆ ಮೂಲ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿಯಿಂದ ತಹಸೀಲ್ದಾರ್ ನಾಗರಾಜ ಕೆ. ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ತಾಲೂಕಿನ ಕೊತಬಾಳ ಗ್ರಾಮದ ರಿ.ಸ. ನಂ. 95/2, 95/3, 95/4, 95/5ರ ಒಟ್ಟು 4 ಎಕರೆ 6 ಗುಂಟೆ ಜಾಗದಲ್ಲಿ ಆಶ್ರಯ ಮನೆ ನಿರ್ಮಿಸಿ ನಿವಾಸಿಗಳಿಗೆ ಹಕ್ಕು ಪತ್ರ ನೀಡಲಾಗಿದೆ. ಆದರೆ, ಅಲ್ಲಿಂದ ಇಲ್ಲಿಯವರೆಗೂ ಅಲ್ಲಿ ರಸ್ತೆ, ಗಟಾರ್, ವಿದ್ಯುತ್ ಹಾಗೂ ಮೂಲ ಸೌಲಭ್ಯ ಕಲ್ಪಿಸಿಲ್ಲ. ಶೀಘ್ರ ಮೂಲ ಸೌಲಭ್ಯ ಕಲ್ಪಿಸಿ ನಿವಾಸಿಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಮನವಿ ಮೂಲಕ ಒತ್ತಾಯಿಸಿದ್ದಾರೆ.

ಚಂದ್ರಶೇಖರ ಕಂದಕೂರ, ಸಿ.ಎಸ್. ನೀಲಗುಂದ, ಸೋಮು ನಾಗರಾಜ ಇತರರು ಇದ್ದರು.



SATYAMITHI KANNADA DAILY MORNING OWNER, PUBLISHER, BY: CHANNAVEERAPPA NINGAPPA SAMAGANDI PUBLISHED FROM: KELAGAL{ETH, NEAR BASAVESHWAR DEVASTAN, HOME NO. 169, WARD NO, 4 MAIN ROAD GAJEDRAGAD, GADAG KARNATAKA - 582114 PRINTED AT: MAILARALINGESHWAR PRINTERS, WARD NO, 3, SUDI TQ, GAJENDRAGAD, GADAG, KARNATAKA- 582114